ಅಂಬಿಕಾತನಯ ದತ್ತ

[illegible]

[illegible]

[illegible]

ಕ.ಪ. 32

[illegible]

[illegible]

# ಕನ್ನಡ

# ಮೇಘದೂತ

ಅಂಬಿಕಾತನಯಃ ದತ್ತ

ಸಾಧನ ಮುದ್ರಣಾಲಯ, ಧಾರವಾಡ.

ಬೆಲೆ: ೧ ರೂ.

ಮುದ್ರಕರು ಮತ್ತು ಪ್ರಕಾಶಕರು :
ಶೀ. ಗೋ. ಕುಲಕರ್ಣಿ
ಸಾಧನ ಮುದ್ರಣಾಲಯ, ಧಾರವಾಡ



ಮೊದಲ ಮುದ್ರಣ ಡಿಶಂಬರ ೧೯೪೩
ಎರಡನೆಯ ಮುದ್ರಣ ಜೂನ್ ೧೯೫೩

# ಅರ್ಪಣೆ

ನನ್ನ ಸೌಭಾಗ್ಯಲಕ್ಷ್ಮಿಗೆ

ಕಾಳಿದಾಸನ ಕಡಲ
ಮುತ್ತು ಮಾಲೆಯನಿತ್ತೆ.
ಮುಡುಪನೊಪ್ಪಿದೆಯೆಂದು ಮುಕ್ತಳಾಗು ॥

ಓ ಯಕ್ಷಿ, ಚೈತ್ರಾಕ್ಷಿ,
ಚೆನ್ನೆ, ಹೃದಯದ ಸಾಕ್ಷಿ,
ನನ್ನ ಕಲ್ಯಾಣಕ್ಕೆ ಯುಕ್ತಳಾಗು ॥

# ಪ್ರಸ್ತಾವನೆ

ಕರ್ನಾಟಕದಲ್ಲಿ ಕಾಲಿದಾಸನಿಗಿದ್ದಷ್ಟು ಮಾನ ಭರತಖಂಡದಲ್ಲಿ ಬೇರೆ ಯಾವ ಪ್ರಾಂತದಲ್ಲಿ ಇದೆಯೋ ನನಗೆ ಗೊತ್ತಿಲ್ಲ. ಪ್ರಾಚೀನ ಕಾಲದಿಂದಲೂ ನಮ್ಮ ಜನರಿಗೆ ಅವನಲ್ಲಿ ಅತ್ಯಂತ ವಿಶ್ವಾಸ. ತಾನು ಜೀವಿಸಿರುವಾಗಲೇ ಕಾಲಿದಾಸನು ಗುಪ್ತರ ರಾಜದೂತನಾಗಿ ಬನವಾಸಿಯ ಕದಂಬರ ಕಡೆಗೆ ಯಾವುದೋ ರಾಯಭಾರಕ್ಕಾಗಿ ಬಂದಿರಬೇಕು ಎಂದು ಇತಿಹಾಸಜ್ಞರು ಊಹಿಸಿದ್ದಾರೆ. ಸೇನರಿಗೂ, ಗುಪ್ತರಿಗೂ, ಕದಂಬರಿಗೂ ಇದ್ದ ಶರೀರ ಸಂಬಂಧದ ಕೊಡುಕೊಳ್ಳೆ ಪ್ರಖ್ಯಾತವೇ ಇದೆ. ಕಾಲಿದಾಸನು ಯಾವ ದುಷ್ಯಂತನಿಗಾಗಿ ಯಾವ ಶಕುಂತಲೆಯನ್ನು ನೋಡಬಂದಿದ್ದನೋ ತಿಳಿಯದು. ಈ ವಿವಾಹಕ್ಕೆ ಯಾವದೋ ಅವಿನಯದ ದುರ್ವಿನೀತನು ಅಡ್ಡ ಬಂದಿರಬಹುದೆಂತಲೂ ಊಹೆಗೆ ಅವಕಾಶ ಉಂಟು. ಅದೇನೆ ಇರಲಿ. ಕಾಲಿದಾಸನು ದೂತನಾಗಿ ಬಂದಿದ್ದರೆ ಮೇಘದೂತದ ಕಲ್ಪನೆ ದಕ್ಷಿಣದಲ್ಲಿಯೇ ಹುಟ್ಟಿತೆಂದು ಹೇಳಬಹುದೆ?

ಊಹೆಗಳು ತಮ್ಮಷ್ಟಕ್ಕಿರಲಿ. ಪ್ರಖ್ಯಾತ ಪುಲಕೇಶಿಯ ಮಹತ್ವದ ಶಿಲಾಶಾಸನವನ್ನು ಬರೆದ ಐಹೊಳೆಯ ಕವಿ ರವಿಕೀರ್ತಿ ತಾನು ಕಾಲಿದಾಸ ಸಮಾನನಾಗಬೇಕೆಂದು ಹಂಬಲಿಸುತ್ತಿರುವುದಾಗಿ ನಮಗೆ ಗೊತ್ತಿದೆ. ನೃಪತುಂಗನ ಕವಿರಾಜಮಾರ್ಗದಲ್ಲಿ ಕಾಲಿದಾಸನು ಕನ್ನಡ ಕವಿಗಳ ಆದರ್ಶ ಪಂಕ್ತಿಗೆ ಸೇರಿದ್ದಾನೆ. ಕವಿರಾಜ ಪಂಪನು ಕಾಲಿದಾಸನ ಪ್ರಖ್ಯಾತ ಶ್ಲೋಕ ಕನ್ನಡಿಸಿದ್ದಾನೆ. ಕವಿಚಕ್ರವರ್ತಿ ಪೊನ್ನ ಕಾಲಿದಾಸನಿಗೂ ಮೇಲಾಗುವ ಭರದಲ್ಲಿ ಅನೇಕಾನೇಕ ಪದ್ಯಗಳಲ್ಲಿ ಕಾಲಿದಾಸನನ್ನು ಅನುಸರಿಸಿದ್ದಾನೆ. ವೀರಕವಿ ರನ್ನ ಕಾಲಿದಾಸನಿಗೆ ನಮಿಸದೆ ಹೋಗಿಲ್ಲ. ಇಷ್ಟಿದ್ದರೂ, ಸಂಸ್ಕೃತ ಪ್ರಾಕೃತ ಗದ್ಯ ಪದ್ಯ ಕಾವ್ಯಗಳು ಕನ್ನಡಕ್ಕೆ ಬರುವದು ಪಂಪನಿಗಿಂತಲೂ ಪ್ರಾಚೀನವಾಗಿದ್ದರೂ ಕನ್ನಡದಲ್ಲಿ ಶಾಕುಂತಲ ಮೇಘದೂತಗಳು

ಒಡಮೂಡಬೇಕಾದರೆ ಕ್ರಿ. ಶ. ೧೯ನೆಯ ಶತಮಾನದ ವರೆಗೆ ಕಾಯ ಬೇಕಾಯಿತು.

ಶಾಕುಂತಲ ನವೀನ ಟೀಕೆ, ತೂರಮರಿ ಶೇಷಗಿರಿರಾಯರ, ಬಸಪ್ಪ ಶಾಸ್ತ್ರಿಗಳ ಶಾಕುಂತಲ ನಾಟಕಗಳು ಮೊದಲು ಬಂದವು. ಶಾಂತಕವಿ, ವರದಾಚಾರ್ಯರು, ಶ್ರೀ. ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳು, ಶ್ರೀ. ರೈನಾಪೂರ ಇವರ ಮೇಘದೂತ ಕಾವ್ಯಗಳು ಮತ್ತು ಭಾಗಗಳು ಹೋದ ಶತಮಾನದ ಕೊನೆಯ ದಶಕದಲ್ಲಿ ಪ್ರಾರಂಭವಾಗಿ ೧೦ ವರ್ಷಕ್ಕೊಂದು ತೆರೆಯಂತೆ ಬಂದೇ ಬಂದು ಈ ವರ್ಷ ಮೇಘದೂತಕ್ಕೆ ಹುಚ್ಚು ಹೊಳೆ ಬಂದಿದೆ. ವಿಕ್ರಮ ಶಕಕ್ಕೆ ಎರಡು ಸಾವಿರ ವರ್ಷಗಳಾದವು. ಬೇಗನೆ ಉಜ್ಜಯಿನಿಯಲ್ಲಿ ಭಾರತೀಯ ಉತ್ಸವವಾಗಲಿದೆ. ಕರ್ನಾಟಕದಲ್ಲಿಯೂ ಕಾಲಿದಾಸನ ಕಾವ್ಯ ನಾಟಕಗಳ ವಿಮರ್ಶೆಗಳ ಸುಗ್ಗಿ ಬಂದಿದೆ. ಪ್ರಬುದ್ಧ ಕರ್ನಾಟಕ, ಜಯಂತಿ, ಪರಿಷತ್ ಪತ್ರಿಕೆ, ಕನ್ನಡ ನುಡಿಗಳಲ್ಲಿ ಕಾಲಿದಾಸನ ಮಾತೇ ಮಾತು. ತಿನಮೊಗ್ಗೆ ಸಪ್ತಾಹವನ್ನೇ ಮಾಡಿತು. ಸಂಸ್ಕೃತ ಕವಿಚರಿತೆ, ಸಂಸ್ಕೃತ ನಾಟಕಗಳು, ಪ್ರಚಾರ ಪುಸ್ತಕ ಮಾಲೆ ಇವುಗಳಲ್ಲಿ ಕಾಲಿದಾಸ ವಿಚಾರ ತಕ್ಕಷ್ಟು ಬಂದಿದೆ. ಈ ವರ್ಷದ ಆಕಾಶ ವಾಣಿಗಳಲ್ಲಿ ಮುಂಬೈಯಿಂದಲೂ, ಮೈಸೂರಿನಿಂದಲೂ ಹಲವು ರಸಿಕರು ಕಾಲಿದಾಸನ ಕಾವ್ಯಗಳ ಗುಣಗಾನ ಮಾಡಿದ್ದಾರೆ. ಶ್ರೀ. ಸಿ. ಕೆ. ವೆಂಕಟರಾಮಯ್ಯನವರ ಉಪನ್ಯಾಸಗಳು, ಶ್ರೀ. ಮಾಸ್ತಿಯವರ ಮೇಘದೂತ ಪ್ರಬಂಧ, ಕಾಲಿದಾಸನನ್ನು ಕುರಿತು ಬರೆದ ಅಷ್ಟಷಟ್ಪದಿ ( ಮಲಾರದಲ್ಲಿ ) ಅವನ ಕನ್ನಡ ಕೀರ್ತಿಗೆ ಕಳಸವಿಟ್ಟವೆ. ಕಾಲಿದಾಸ ಪ್ರೇಮಿಗಳಲ್ಲಿ ಶ್ರೀ. ದೇವುಡು ಅವರೊಬ್ಬರು. ಈ ಒಂದೆರಡು ವರ್ಷಗಳಲ್ಲಿ ಶ್ರೀ. ದೇವುಡು ಅವರು ತಮ್ಮ ಮೇಘದೂತ ಟೀಕೆ ಭಾಷಾಂತರಗಳನ್ನು ಪ್ರಕಟಗೊಳಿಸುತ್ತಿದ್ದಾರೆ. ಶ್ರೀ. ಪರಮೇಶ್ವರಭಟ್ಟರು ತಮ್ಮ ಕನ್ನಡ ಮೇಘದೂತವನ್ನು ಪ್ರಕಟಗೊಳಿಸುವವರಿದ್ದಾರೆ. ನನ್ನ ಈ ಮೇಘದೂತ ಹೋದ ವರ್ಷದ ನಾಡಹಬ್ಬದಲ್ಲಿಯೇ ಬರೆದು ಮುಗಿಸಲಾಯಿತು; ಈಗ ಪ್ರಕಟವಾಗುತ್ತಿದೆ.

ಹೀಗೆ ಮೇಘದೂತವನ್ನು ಕುರಿತು ಅನೇಕ ಕಾವ್ಯ ಹೊರಡುವದು ಆಶ್ಚರ್ಯವೂ ಅಲ್ಲ! ಅನುಚಿತವೂ ಅಲ್ಲ! ೧೮ ನೆಯ ಶತಮಾನದಲ್ಲಿಯೇ ಮೇಘದೂತ ಇಂಗ್ಲಿಷದಲ್ಲಿ ಅವತರಿಸಿತು. ಜರ್ಮನ ಕವಿಯೊಬ್ಬನಿಗೆ

ಪ್ರತಿಭಾ ಪ್ರೇರಕವಾಯಿತು. ಇಂದಿಗೂ ಮೇಘದೂತದ ಹೊಸ ಹೊಸ ಭಾಷಾಂತರಗಳು ಬಂದೇ ಬರುತ್ತಿವೆ. ಇಂಗ್ಲಿಷಿನಲ್ಲಿ ಶ್ರೀ. ರವೀಂದ್ರರು ಮೇಘದೂತವನ್ನು ಕುರಿತು ಗದ್ಯಪದ್ಯ ಬರೆದಿದ್ದಾರೆ. 'ವಿಕ್ರಮೋರ್ವಶೀಯ' ವನ್ನು ಇಂಗ್ಲಿಷಿಗಿಳಿಸಿದ ಶ್ರೀ. ಅರವಿಂದ ಘೋಷರು ಮೇಘದೂತವನ್ನೂ ಭಾಷಾಂತರಿಸಿದ್ದರಂತೆ. ಹಿಂದುಸ್ಥಾನದ ಪ್ರಾಂತೀಯ ಬೇರೆ ಬೇರೆ ಭಾಷೆಗಳಲ್ಲಿ ಕಾಲಿದಾಸ ವಾಂಙ್ಮಯ ತುಂಬಾ ಇದೆ. ನೆರೆಹೊರೆಯ ಮಹಾರಾಷ್ಟ್ರದಲ್ಲಿ ಮೇಘದೂತ ಅನೇಕ ಸಲ ಕಾವ್ಯರೂಪ ತಾಳಿದೆ. ಇಂಡಿಯ ಸರ್ಕಾರದ ಅರ್ಥಶಾಖೆಗೆ ಸೇರಿದ ಮೇಲಧಿಕಾರಿಗಳೊಬ್ಬರು ಮೇಘದೂತದ ಭಾಷಾಂತರವನ್ನು ಒಳಗೆಳೆಯರಿಗಾಗಿ ಪ್ರಕಟಿಸಿ ಅರ್ಥದ ರಾಜ್ಯದಲ್ಲಿಯೂ ಸಾಹಿತ್ಯ ಇಂಗಿಹೋಗಲಾರದೆಂದು ತೋರಿಸುತ್ತಿದ್ದಾರಂತೆ.

ಮೇಘದೂತ ಕಾವ್ಯವನ್ನು ಕುರಿತು ವಿಮರ್ಶಾವಿಚಕ್ಷಣರು ಅನೇಕ ತರ್ಕಗಳನ್ನು ಮಾಡಿದ್ದಾರೆ. ಕಾಶ್ಮೀರದ ಕವಿಜೀವವೊಂದು ರಾಜಕಾರ್ಯಕ್ಕಾಗಿ ಮನೆಯಿಂದ ಅಗಲಬೇಕಾಗಿ ಬಂದ ಸಂದರ್ಭ ಇದಕ್ಕೆ ಮೂಲವಾಗಿರಬೇಕು ಎಂದು ಕೆಲವರು. ಉಜ್ಜಯಿನಿಯಿಂದ ದಕ್ಷಿಣಕ್ಕೆ ಅಗಲಿಬಂದ ವಿರಹಿರಸಿಕನ ಕಾವ್ಯವಿದೆಂದು. ಕಾಲಿದಾಸನ ಜೀವನದ ಒಂದು ಸಂದರ್ಭವೇ ಯಕ್ಷಯಕ್ಷಿಯರ ನೆಪದಿಂದ ಕವನವಾಗುತ್ತಿರುವದೆಂದು ಕೆಲವರು. ರಾಮಾಯಣದೊಳಗಿನ ಹನುಮಂತನ ದೌತ್ಯದಿಂದ ಪ್ರೇರಣೆ ಪಡೆದ ಕಾಲಿದಾಸ ಹೊಸಮಾದರಿಯ ಈ ಕಾವ್ಯ ಬರೆದನೆಂದು ಕೆಲವರು, ಗುಪ್ತರಾಜರೊಡನೆ ದೇಶ ಸಂಚಾರಮಾಡಿ ರಘುವಂಶ ಕಾವ್ಯದಲ್ಲಿ ಬೇರೆವರ್ಣನೆ ಮಾಡಿ ತೃಪ್ತಿ ಪಡೆಯದ ಕವಿ ಈ ಭಾವ ಕಾವ್ಯದಲ್ಲಿ ತನ್ನ ಹೃದಯದ ಪ್ರೀತಿಯನ್ನು ಹರಿಬಿಟ್ಟಿರುವನು ಎಂದು ಕೆಲವರು ಪಕ್ಷವಹಿಸಿ ರಸಿಕವಾದ ವಾದಸಂವಾದ ಬೆಳಿಸುವದುಂಟು. ಮೇಘಸಂದೇಶದಲ್ಲಿ ಸಂದೇಶ ಮೂಲೆಗ ಬಿದ್ದು ಕಾವ್ಯ ರೂಪವೇ ಜೀರೆಯಾಗಿದೆಯೆಂದು ಕೆಲವರು ಭಾವಿಸುವರು. ವಾದಗೀದಗಳೇನೇ ಇರಲಿ ಈ ದೂತ ಕಾವ್ಯದ ರಚನೆಗೆ ರಸಿಕಜನ ಮೆಚ್ಚಿ ಈ ಸಂದರ್ಭವನ್ನೋ ಶಬ್ದಾರ್ಥ ಸಂಪತ್ತಿಯನ್ನೋ ಅನುಸರಿಸಿ, ಅನುಕರಿಸಿ, ಅನುವಾದಿಸಿ, ಪ್ರತಿಪದಿಸಿಯೂ ಹಲವರು ಸುಖಪಟ್ಟಿದ್ದಾರೆ, ಕೊಟ್ಟಿದ್ದಾರೆ. ದೂತಕ್ಕೆ ಪ್ರತಿದೂತಗಳು ಹುಟ್ಟಿವೆ. ಮೇಘದೂತದ ಮೇಘ ಎನ್ನೋ

ಹೊಗೆಮಂಜಲ್ಲ ಹೃದಯದ ಮಂತ್ರ ಎಂಬುವಂತಾಗಿದೆ. ಮೇಘದೂತದಲ್ಲಿ ಬಳಸಿದ ವೃತ್ತಗತಿಗೂ ಮೋಹಿತರಾದವರುಂಟು. ಕ್ಷೇಮೇಂದ್ರಕವಿ ವೃತ್ತ ಔಚಿತ್ಯದಿಂದ ಕಾವ್ಯಕ್ಕೆ ಕಳೆಕಟ್ಟುವ ಸಂದರ್ಭಕ್ಕೆ ಮೇಘದೂತದ ಮಂದಾಕ್ರಾಂತವನ್ನು ಉದಹರಿಸುತ್ತಾನೆ. ಮೇಘದೂತದಿಂದಲೇ ಮಂದಾಕ್ರಾಂತ ವೃತ್ತವು ಸಂಸ್ಕೃತ ಸಾಹಿತ್ಯಪ್ರಪಂಚದಲ್ಲಿ ನೆಲೆಗೊಂಡು ನಿಂತಿತು. ಕಾಲಿದಾಸನ ಮೊದಲು ಈ ವೃತ್ತವನ್ನು ಈ ಪ್ರತಿಭೆಯಿಂದ ಬಳಸಿದವರೇ ಇಲ್ಲ.

ಮೇಘದೂತದಲ್ಲಿ ಒಬ್ಬ ಯಕ್ಷಯಕ್ಷಿಯರ ವಿರಹಾವಸ್ಥೆಯ ವರ್ಣನೆ ಇದೆ. ವಿರಹಾವಸ್ಥೆಯಲ್ಲಿ ತಾಳಿ ಬಾಳುವ ಕಾಮುವೇ ಧರ್ಮ ಅವಿರುದ್ಧ ಕಾಮುವೆನಿಸಿ ಜೀವೋನ್ನತಿಯ ಹಾದಿಯಾಗುವದು. ಶಾಕುಂತಲದಲ್ಲಿಯೂ, ವಿಕ್ರಮೋರ್ವಶೀಯದಲ್ಲಿಯೂ ದುಷ್ಯಂತ, ಪುರುರವರ ವಿರಹವರ್ಣನೆ ರಮ್ಯವಾಗಿಯೇ ಬಂದಿದೆ. ಅವೆರಡು ವಿರಹದ ಮುಖಗಳು. ಮೇಘದೂತದಲ್ಲಿಯ ವಿರಹಕಾವ್ಯ ಬೇರೆ ಬಗೆಯದಾಗಿದೆ. ವಿರಹದಿಂದ ಯಕ್ಷನಲ್ಲಿ ವಿಕಾರದಲ್ಲಿಯೂ ವಿಕೃತಿಗೊಳ್ಳದ ಧೃತಿಗೆ ಅನುಕೂಲವಾದ ಭಾವಗಳ ಉದಯವಾಗಿದೆ. ಯಕ್ಷನ ಲಲಿತದಲ್ಲಿಯೇ ಒಂದು ಪ್ರಶಾಂತಿ ಇದೆ; ಒಂದು ಉದಾತ್ತತೆ ಇದೆ. ಅವನಿಗೆ ಕಂಡ ವಿಶ್ವದಲ್ಲಿ ಪಾಪ, ದೌರ್ಜನ್ಯಗಳಿಗೆ ನೆಲೆಯೇ ಇರುವಂತಿಲ್ಲ ಅಥವಾ ಅದರ ಬಗ್ಗೆ ಅವನಿಗೆ ಉಪೇಕ್ಷೆ ಹುಟ್ಟಿದೆ. ತನ್ನ ದುರ್ದೈವದ ಬಗ್ಗೆ ಆಗಲಿ, ತನ್ನ ಒಡೆಯನ ಅತಿ ಕೋಪದ ಅವಿವೇಕದ ಬಗ್ಗೆ ಆಗಲಿ, ತನ್ನ ಸುತ್ತಲಿನ ಲೌಕಿಕದ ಸಾಮಾನ್ಯ ಜೀವನವನ್ನು ನೋಡಿಯೇ ಆಗಲಿ, ಅವನಿಗೆ ನಿಷ್ಠುರತೆ ಇಲ್ಲ. ಒಂದು ಪಾರಾವತಗಳೋ ಒಂದು ಅಭಿಸಾರಿಕೆಯರೋ ಒಂದು ನರ್ತಕಿಯರೋ ಎಲ್ಲರ ಬಗ್ಗೆಯೂ ಅವನಿಗೆ ಕನಿಕರ ತುಂಬಿದ—ಮಾಧುರ್ಯ. ಅಂತೆಯೇ ಅವನ ಕಣ್ಣಿಗೆ ಕಾಣುವದೆಲ್ಲವೂ ಚೆಲುವು. ಒಮ್ಮೊಮ್ಮೆ ಅಲ್ಲಲ್ಲಿ ಇಣುಕುವ ಬಿರಸೂ ಇಲ್ಲಿಯ ಹುಟ್ಟು ಮಿದುವಿಗೆ ಹಿನ್ನೆಲೆಯಾಗುವದು. ಕಾಮಿ ಯಕ್ಷ ವಿರಹದಿಂದ ಕವಿಯಾಗುವನು. ಅವನ ಕಣ್ಣು ಚೆಲುವಿಗೆ ಕಣ್ಣಾಗುವದು. ಅವನ ಹೃದಯ ರಸಕ್ಕೆ ನೆಲೆಯಾಗುವದು. ಕಾಲಿದಾಸ ಈ ಮನಃಪರಿಪಾಕವನ್ನು ಬಹು ರಮ್ಯವಾಗಿ ಧ್ವನಿಪೂರ್ಣವಾಗಿ ಚಿತ್ರಿಸಿದ್ದಾನೆ. ಎಲ್ಲ ಪುರುಷ ಹೃದಯಗಳೂ

ಯಕ್ಷನಾಗಿ, ಮೇಘವು ರಸಪೂರ್ಣ ಹೃದಯವಾಗಿ, ಯಕ್ಷಿ ಪ್ರೀತಿಯ ಅಧಿದೇವಿಯಾಗಿ, ಗುಡ್ಡ, ಹೊಳೆ, ಜನ, ಜನಪದ, ಪಶು, ಪಕ್ಷಿಗಳಿಂದ ತುಂಬಿದ ಪ್ರಕೃತಿ ಚೆಲುವಿನ ಓಲೆಯಾಗುವದು. ಧರ್ಮಾವಿರುದ್ಧವಾದ ಕಾಮದಲ್ಲಿ ಹುಟ್ಟಿದ ಕಾವ್ಯ ಭಕ್ತಿಯ ಸಂಕೇತವಾಗುವದು.

ಈ ಅಧ್ಯಾತ್ಮಿಕ ದೃಷ್ಟಿ ಕಾಲಿದಾಸನ ಎಲ್ಲ ಕೃತಿಗಳಲ್ಲಿಯೂ ಕಂಡು ಬರುವದು. ಪುರೂರವ ಊರ್ವಶಿಯರ ವೇದೋಕ್ತ ವಿರಹಸೂಕ್ತದಲ್ಲಿ ಈ ಆಧ್ಯಾತ್ಮಿಕ ಸಂಕೇತವು ತುಂಬಿಕೊಂಡಿದೆ. ಯಮ ಯಮಿಯರ ಸಂವಾದ ದಲ್ಲಿಯೂ ಅಗಸ್ತ್ಯ ಲೋಪಾಮುದ್ರೆಯರ ಸಂವಾದದಲ್ಲಿಯೂ ಮಿಂಚುವ ಕಾಮದ ವಾಮಮಾರ್ಗವೂ ಆತ್ಮಿಕ ಸಂಕೇತ ಪರಿಪೂರ್ಣವಾಗಿದೆ. ಕ್ರೌಂಚ ಮಿಥುನದ ವಿರಹದಿಂದ ಪ್ರೇರಿತವಾದ ವಾಲ್ಮೀಕಿಯ ಅಪಾರ ಕರುಣ ಸ್ಫೂರ್ತಿ, ಸೀತಾರಾಮರ ಅವ್ಯಂಗ ಪ್ರಣಯವನ್ನು ವರ್ಣಿಸಲು ಸಮರ್ಥ ವಾಯಿತೆಂದು ಬೇರೆ ಹೇಳಬೇಕೆ? ಉಪನಿಷತ್ತುಗಳಲ್ಲಿಯೂ ಮಹಾ ಭಾರತದಲ್ಲಿಯೂ ಯಕ್ಷ ಗೂಢ ವ್ಯಕ್ತಿಯಾಗಿಯೇ ಬಂದಿದೆ. ಕಾಲಿದಾಸನ ಯಕ್ಷನು ಕಾಲಿದಾಸನೇ ಇರಬಹುದು; ಅಥವಾ ಎಲ್ಲ ಶುದ್ಧ ಹೃದಯಗಳ ರಾಗೋನ್ನತ ಅಭೀಕ್ಷೆಯೇ ಇರಬಹುದು. ಯಕ್ಷರದು ದೇವಜಾತಿ. ಇಲ್ಲಿಯ ವಿರಹ ಮಾನವೀಯ. ಇಲ್ಲಿಯ ಕಾವ್ಯ ಮಾನವತೆಯಿಂದ ದಿವ್ಯತೆಗೆ, ರಾಮ ಗಿರಿಯಿಂದ ಕೈಲಾಸದೆಡೆಯ ಅಲಕಾವತಿಗೆ ಹೋಗುವ ರಾಜಹಂಸಗಳ ಆಕಾಶಮಾರ್ಗ. ನೀರು ಮಿಂಚುಗಳಿಂದ ತುಂಬಿದ ಮೂಕ ಮೇಘವು ಮಾತಿಗಳಪಡದ ರಸದ ಪುಂಜ. ಮೇಘದೂತವನ್ನು ಹೇಗೆ ಸವಿದರೂ ರುಚಿ.

ನನ್ನ ಕನ್ನಡ ಮೇಘದೂತ ಭಾಷಾಂತರ ಎಂದು ನಾನು ಹೇಳಿ ಕೊಳ್ಳಲಾರೆ. ಆ ಗುಣ ಇದಕ್ಕಿಲ್ಲ. ಆದರೆ ಮೇಘದೂತದ ಪ್ರತಿಪದ್ಯ ಓದಿ ನನಗಾದ ಆನಂದವನ್ನು, ನಾನು ಕಂಡ ಚೆಲುವನ್ನು ಈ ಕನ್ನಡ ಪದ್ಯಗಳಲ್ಲಿ ಕಟ್ಟಿದ್ದೇನೆ: ರಚಿಸಿದ್ದೇನೆ. ಮಂದಾಕ್ರಾಂತ ವೃತ್ತದ ಬದಲು | ೩, ೩, ೨ | ಇಂಥ ಮೂರು ಗಣಗಳುಳ್ಳ ಎಂಟು ಮಾತ್ರೆಯ ಗಣ ಮೂರು, ಕೊನೆಗೊಂದು ಗುರು — ಅಂತೂ ೨೬ ಮಾತ್ರೆಯ ಮೂರು ನಾಲ್ಕು ಕಿಂಚಿತ್ ಯತಿಗಳುಳ್ಳ ಕೊನೆಯ ಪ್ರಾಸದ ಚತುಷ್ಪಾದದ ಒಂದು ಹೊಸ 'ರಗಳೆಯ' ಜಾತಿಯನ್ನು

ಇಲ್ಲಿ ರಚಿಸಿ ಬಳಿಸಿದ್ದೇನೆ. ಕಾಲಿದಾಸನ ಸಂಸ್ಕೃತವನ್ನರಿಯದ, ಹೆಣ್ಣು ಗಂ
ಇದನ್ನೋದಿಕೊಂಡು ಒಂದು ಚಿತ್ತ ಪರಿಣಾಮವನ್ನು ಪಡೆಯಲೆಂದ
ಪಡೆಯುವರೆಂದು ನಾನು ಕೋರಿದ್ದೇನೆ. ನಾನು ಮೇಘದೂತವನ
ಕಾಣುವ ರೀತಿ ನನ್ನ ಪದ್ಯ ಪೀಠಿಕೆಯಲ್ಲಿ ಬಂದೇ ಇದೆ.

ಪ್ರಕಟಣೆಯ ಪೂರ್ವದಲ್ಲಿ ಇದನ್ನೋದಿಸಿ, ಕೇಳಿ ಆನಂದಿಸಿ
ಸಹೃದಯ ಮಿತ್ರರಿಗೆ ನಾನು ಕೃತಜ್ಞನಾಗಿದ್ದೇನೆ. ಗೆ| ಶೇಷಗಿರಿರಾ
ಕುಲಕರ್ಣಿ, ಸಾಧನ ಮುದ್ರಣಾಲಯದ ಒಡೆಯರು ಇವನ್ನು ಅಂದವಾ
ಮುದ್ರಿಸಿ ಈ ರೂಪಕ್ಕೆ ತರಲು ಸಾಕಷ್ಟು ಕಷ್ಟಪಟ್ಟಿದ್ದಾರೆ. ಈ ಆವೃ
ಬೇಗನೆ ತೀರಿದರೆ ಇದಕ್ಕೂ ಸೊಗಸಾಗಿ ಇನ್ನೊಂದು ಮುದ್ರಣವನ
ಮಾಡುವ ವಿಚಾರವಿದೆ. ರಸಿಕ ಮಿತ್ರರು ಸೂಕ್ತ ಸಲಹೆಗಳನ್ನು ಈ ಕಾ
ವನ್ನೋದಿ ಕೊಟ್ಟರೆ ಅದನ್ನು ಸರಿಯಾಗಿ ನಾನು ಬಳಸಿಕೊಳ್ಳುವೆ ಅ
ಅನೇಕ ಜನ ತರುಣ ಮಿತ್ರರು ಮೇಘದೂತ ಈಗಿನ ರೂಪಕ್ಕೆ ಬರ
ಕಾರಣರಾಗಿದ್ದಾರೆ. ಅವರೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ. ಅ
ರಲ್ಲಿಯೂ ಚಿ| ರಾಮಚಂದ್ರನಿಗೂ ಶ್ರೀ. ಚಿತ್ತಾಳ ದಾಮೋದರರಾಯರಿಗ
ಗೆ| ಶೇಷಗಿರಿರಾಯರಿಗೂ, ಗೆ| ಚುಳಕಿ ಗೋವಿಂದರಾಯರಿಗೂ ನಾ
ನನ್ನ ಪ್ರೇಮ ಸೂಚಿಸುತ್ತೇನೆ.

**ಸಾಧನಕೇರಿ**
೨೨—೧೨—೪೩

**ದ. ರಾ. ಬೇಂದ್ರೆ**

## ೨ ನೆಯ ಆವೃತ್ತಿಯ ಮಾತು

ಇದನ್ನು ಪಠ್ಯಪುಸ್ತಕವನ್ನಾಗಿ ಮಾಡಿದ್ದಕ್ಕಾಗಿ ಕರ್ನಾಟಕ ವಿ
ವಿದ್ಯಾಲಯದವರಿಗೆ ನಾನು ಋಣಿಯಾಗಿದ್ದೇನೆ. ಇದನ್ನು ರಸಿಕ
ದಿಂದೋದಿ ಅಭಿಪ್ರಾಯ ಸೂಚನೆ ತಿಳಿಸುವವರಿಗೆ ಅದಕ್ಕೂ ಹೆಚ್ಚು ಋ
ಯಾಗುವೆನು.

**ಸೊಲ್ಲಾಪುರ**
೮-೪-೧೯೫೩

**ದ. ರಾ. ಬೇಂದ್ರೆ**

# ಪೀಠಿಕೆ

**ಅನಾದಿ ಕಾಮದ ಕ್ರಮ:**

ಬ್ರಹ್ಮ-ಹೃದಯದಲಿ ಜನಿಸಿದಿಚ್ಛೆ ಕೊನೆಗಾಣಲೆಂದು ಬಾಳಿ
ಕಂಡ ಕಡೆಗು ಶತರೂಪೆಯಲ್ಲಿ ಮಧು-ರೂಪ-ರೂಪತಾಳಿ ||
ಜಗದ ತಂದೆ-ತಾಯಿಯರ ಕಂದ ಅವತರಿಸೆ ಜೀವನಾಗಿ
ಬಂತು ಪೂರ್ವದಲಿ, ದೇವ-ಕಾಮವೇ ಕಾಮ-ದೇವನಾಗಿ ||

ರತಿಯನಗಲಿಸಿದರಯ್ಯೊ ಪಾಪಿಗಳು ಕಾಮನನ್ನು ರಮಿಸಿ
ಶಿವನ ನೇತ್ರಕಾಹುತಿಯ ಕೊಟ್ಟರೋ, ಒಳಿತು ತಪ್ಪ ಕ್ಷಮಿಸಿ ||
ರತಿಯ ವಿರಹದಲಿಬೆಂದ ಕಾಮ; ಎಚ್ಚತ್ತ ಭೂತಪತಿಯು
ಪತಿಯು ಸರ್ವ-ಮಾಂಗಲ್ಯಕಾಗಿ ಅಳಬೇಕೊ, ಪಾಪ! ರತಿಯು ||

ವಿರಹಪೂತರತಿಜೀವ ಮೂಲಸತಿ ಚಿತ್ತರಂಗದಲ್ಲಿ
ಸಾಂಗವಾಗಿ ಮೈಗೂಡಿಕೊಂಡಳೋ ಆ ಅನಂಗನಲ್ಲಿ ||
ಋತುವಿನೊಂದು ಪ್ರೇರಣೆಗೆ ಕೂಡುವದು ಬಲ್ಲದೇನು ಪಶುವು
ಪ್ರೌಢ ರತಿಯ ಕೈಕೂಸು ಆಗಿ ಬೆಳೆದಿಹುದು ಕಾಮ-ಶಿಶುವು ||

ನನ್ನ ಕಿಚ್ಚಿನೊಳಿ ಬೆಂಕಿ ಸುಟ್ಟು ಬೆಳಕಾಗಿ ಮಿಂಚಬಹುದು
ಮೂಲಕಾಮದಲಿ ವಿರಹ ಬೆಳೆದು ಸುಪ್ರೇಮವರಳಲಹುದು ||
ಮನಸ್ಸಿಜಾತ ಕುತುಕಕ್ಕೆ ರಮ್ಯ ತಪಸಿಧಿಯು ಹಾಗೆ ಭವ್ಯ
ಸೌಖ್ಯಕಾಗಿ ಸೀರಡಿಸಿ ನಿಂತ ಸೌಂದರ್ಯದಂತೆ ದಿವ್ಯ ||

ಅನ್ನ ಪ್ರಾಣಗಳ ಮಿಥುನದಂತೆ ವೈ ಎರಡೂ ಕಲೆತು ಬೆರೆತು
ಮನದ ಕಾವಿನಲಿ ಕಾಮುವಾಗಿ ಮನದಾಚೆಗೇನೋ ಅರಿತು ||
ಚಿತ್ತದಲ್ಲಿ ನಿಷ್ಕಾಮರತಿಯು ರಸಪಾಕವಾಗಿ ನಿಂತು
ಧಾರೆಗೆಡದೆ ಭಗವಂತನಲ್ಲಿ ಚಿರಭಕ್ತಿಯಾಗಿ ಬಂತು ||

ಬ್ರಹ್ಮದಿಂದ ಅಗಲಿಸಿತು ಮಾಯೆ ಆ ಬಹ್ಮಕದುವೆ ಸೇತು
ಬೀಜವೊಡೆಯೆ, ಆ ಬೀಜಪಡೆಯು ಬರುವಂತೆ ಬೀಜ ಹೂತು ||
ಇಹುದು ಎಂದರದು ಅಹುದು ಇದಿರು; ಇದು ಅಲ್ಲವೆಂದರಿಲ್ಲ
ದೇವಮಾಯೆ ಆದರಾಟ ಮಾಟಗಳ ಬಲ್ಲನೊಬ್ಬ ಬಲ್ಲ ||

**ಜೀವಲೋಕದಲ್ಲಿ ಕಾಮ :**

ಭಿನ್ನದೇಹದಲಿ ಏಕಜೀವ ಕಾಣುವರು ಕರಗಿ ಮಾಗಿ
ಯಾರೊ ಮೋಹದಲಿ, ಯಾರೊ ಊಹೆಯಲಿ, ಯಾರೊ ಯೋಗಿಯಾಗಿ
ಸವಿಯನುಣ್ಣುವರು ಬಾಳನೆಲೆಯ ಬಗೆಬಗೆಯ ಜಾವದಲ್ಲಿ
ಕಾಮಿನೋವಿನಲಿ, ಕವಿಯ ಭಾವದಲಿ, ಭಕ್ತ ಜೀವದಲ್ಲಿ ||

ಕಾಮತೃಪ್ತಿಯಲಿ ಸ್ನೇಹಸುಪ್ತಿಯಲಿ ಒಬ್ಬ ವೈಯ್ಯನುಣಿಸೆ
ಭಾವದೀಪ್ತಿಯಲಿ, ಛಂದಮಾಯೆಯಲಿ ಒಬ್ಬ ಮಾತ ಕುಣಿಸೆ ||
ತನ್ನ ಜೀವತಾದಾತ್ಮ್ಯ ಹೊಂದದೇ ತಣಿಸಲಾರನೊಬ್ಬ
ಯಾರಿಗೇತರಲಿ ಜೀವ ಅದುವೆ ಸವಿ; ಅವರಿಗದುವೆ ಹಬ್ಬ ||

ಕಾಮಿ ಬಗ್ಗುವನು ದೇಹಿ ಎಂದು ಮೋಹದಲಿ ಕಾಲಿಗಡಿಸಿ
ಕವಿಯು ಒಗ್ಗುವನು ತನ್ನನಂಗ ಭಾವಕ್ಕೆ ಮಾತುತೊಡಿಸಿ||
ಭಕ್ತ ಹಿಗ್ಗುವನು ತನ್ನ ಜೀವ ಹಸಮಾಡಿ ದೇವನಾಗಿ
ಒಬ್ಬನೊಲಿಸುತಿಹ ಒಂದೆ ನೂಲಿನಲಿ ಎಲ್ಲ ಕಾವನಾಗಿ ||

**ಭೂಮಿಯ ಕಾಮ :**

ಮಣ್ಣು-ಹೆಣ್ಣು ಬಾನೊಡೆಯನಿಂದ ಅಗಲಿಹಳನಾದಿಯಿಂದ
ವಿರಹಬವಣೆಯಲಿ ತಿರುಗೆ ತಿರುಗುವಳು ಹೊತ್ತುಸುತ್ತಿನಿಂದ
ಕಣ್ಣನೀರು ಕಡಲಾಗಿ ಕಾದು ಉಗಿಯಾಗಿ ಮೋಡವಾಗಿ
ಎದೆಗೆ ಉದುರೆ ಬಾನಿಂದ, ನವಿರುವಳು ಹೃದಯ ಹಚ್ಚನಾಗಿ ||

**ಯಕ್ಷ-ಯಕ್ಷಿ :**

ಮೂರು ಮೈಯ್ಯ ಮುಪ್ಪುರಿಯ ಒಲವು ಕಿಚ್ಚಾಗಿ ಕುಲುಮೆಯಂತೆ
ಕಾಮ ಕಾದು ಉಕ್ಕಿತ್ತು ಪ್ರೇಮ ತಂತನದ ನಲುಮೆಯಂತೆ ||
ಆಕೆಗಾತ ಮೈ ಉಸಿರು, ಉಸಿರ ಮೈಯಾಗೆ ಆತಗಾಕೆ
ಕನಸುಮನಸಿನಲಿ ಕಾಂತರಾಗೆ ಏಕಾಂತ ಬೇರೆ ಬೇಕೆ ||

ಮೈಯ ಮಲೆಯ ತಲೆಯಲ್ಲಿ ಎಲ್ಲಿ ಅಸರಂತ ದೇವಲೀಲೆ
ಜೈತಲಂತೆ ಮಿಂಚಾಡೆ ನಡುವೆ, ಹೆಳಲಾಗೆ ಮೇಘಮಾಲೆ ||
ವಿಂಧ್ಯಶಿಖರದಲಿ ಯಕ್ಷಚಿತ್ತ ಅಲಕೆಯನು ಚಿತ್ರಿಸಿಹುದು
ದೇವಜಾತಿ ಕೆಳಗಿಳಿದರೇನು ಅದು ಬಾನ ಹತ್ತಿರಿಹುದು ||

ಈ ಯಕ್ಷನಕ್ಷಿಗಳು ಪಕ್ಷಿಯಂತೆ ಹಾರಿದವು ಗಾಳಿಯಲ್ಲಿ
ಸಿಗಲಿಲ್ಲ ತಾವು ಜಗದಗಲ ಬೀಸಿದಾ ನಯನಜಾಲದಲ್ಲಿ ||
ಶೃಂಗಾರ–ತೀರ್ಥದಲಿ ಮಿಂದ ಚಿತ್ತ ವೈದರ್ಭಿ ರೀತಿಯಾಗಿ
ಅಂತೆಯೇ ಬಂತು ಗಾಂಧರ್ವ ಪ್ರೀತಿ ಗಾಂಧರ್ವ ಗೀತಿಯಾಗಿ ||

ಜೀವವೇನು ಭವಚಕ್ರ ತಿರುಗಿ ಮರೆತೀತು ಆತ್ಮತತ್ತ್ವ
ಮರ್ತ್ಯಕಿಳಿದರೂ ಯಕ್ಷ ಮುಳುಗುವನೆ ಒಳಗೆ ದಿವ್ಯಸತ್ತ್ವ ||
ಅಲಕೆಯಲ್ಲಿ ಕೈಲಾಸದೆಡೆಗೆ ತಾ ವಹಿಸಿ ಸಖನ ಚಿಂತೆ
ಸಾಕ್ಷಿಯಾಗಿ ಆ ಯಕ್ಷಿ ತಪಿಸುತಿರೆ ಅಂತರಾತ್ಮನಂತೆ ||

**ಯಕ್ಷನ ಮೇಘ :**

ವ್ಯೈಯ್ಯ ಉರಿಗೆ ಬಗೆ ಉಗಿಯು ಹೊತ್ತಿ ನಿಟ್ಟುಸಿರಿನೊಡನೆ ಏರಿ
ಕಣ್ಣು–ಮಂಜು ಕಂಬನಿಯು ತುಂಬಿ ಮುನ್ನಿನಹು ಮಿಂಚು ಸೇರಿ ||
ಗುಡುಗೆ ಗುಡುಗುತಿರೆ ವೈರಿ–ವಿಧಿಯ ಕಾಟಕ್ಕೆ ಎದೆಯು ತಾನು
ವಿರಹಿ ಹೃದಯದುದ್ಗಾರಸಾರವೇ ಮೇಘವಲ್ಲದೇನು ||

**ಕವಿಯ ಮೇಘ :**

ಮಾತು ಜ್ಯೋತಿ, ಆ ಹರಳು–ಧೂಮ, ರಸ ಸಲಿಲ, ಭಾವ ಗಾಳಿ
ಕವಿಯೊಳಾಗಿ ಕಟ್ಟಿತ್ತು ಕಾವ್ಯ ನವಮೇಘರೂಪ ತಾಳಿ ||
ಸ್ಥಾಯಿ ಅಲ್ಲಿ ಸಂಚಾರದಲ್ಲಿ ರಸಪಾಕವಾಗಿ ಬಂತು
ಮೆರೆವ ಹಾಗೆ ಆ ಸುಟ್ಟ ಕಾಮ ಪ್ರದ್ಯುಮ್ನನಾಗಿ ನಿಂತು ||

**ಕವಿಕಾಳಿದಾಸ :**

ತಾನು ಉಂಡ ಎದೆಯೊಲುಮೆ ತಾನು ಸೊಗವಟ್ಟು ಪಡೆದ ಹೆಣ್ಣು
ತಾನು ಕಂಡ ಋತುಮಾನ ತನ್ನ ಬಾಗಿಸಿದ ಚೆಲುವು ಕಣ್ಣು ||
ಬಂದ ಬಂದ ನದಿ ಬೆಟ್ಟ ಪಟ್ಟಣದ ರಮ್ಯಛಾಯೆಯಿಂದ
ಮೋಡವೊಂದು ನೆವ ಮಾಡಿ ಹಾಡಿದನು ಯಕ್ಷ-ಮಾಯೆಯಿಂದ ||

ಇರಲಿ ಬೆಟ್ಟ ನದಿ, ಇರಲಿ ಶಿವನು ಸತಿ, ಇರಲಿ ಕಾಡು ನಾಡು
ಇರಲಿ ಕಾಮ-ರತಿ, ಅಜನು-ಇಂದುಮತಿ, ಬರಲಿ ಸಾವು ಕೇಡು ||
ಯಕ್ಷ-ಯಕ್ಷಿ ಇರಲಕ್ಷಿ-ಪಕ್ಷಿ ಕಣ್ಗಂಡ ಪಾತ್ರವಿಂದೆ
ಪ್ರೇಮದಾಟವನು ಕವಿಯು ಆಡಿಸಿದ ಕಾಮಸೂತ್ರದಿಂದ ||

ಜಗವೆ ದೇವತನುವೆಂದು ಮಣಿವೆ ನೀನೇನು ನಿನ್ನ ಮತಿಯು
ರತಿಯು ನಿನ್ನ ರಸದಲ್ಲಿ ನಾಂದು ಆಗಿಹಳು ಮುಕ್ತಿ ಸತಿಯು ||
ಭಕ್ತ ನೀನು ಅನುರಕ್ತ ದಿವ್ಯದಲಿ ಉಳಿದ ಕಣ್ಣು ಭವಿಯು
ಎಲ್ಲ ಕಡೆಗು ಚೈತನ್ಯಲೀಲೆ ಕಂಡವನೆ ನೀನೆ ಕವಿಯು ||

ಬೆಟ್ಟಕೊಲಿಯೆ ಮನ ಬೆಟ್ಟದಂತೆ ಬಗೆಹರುಹು ಎತ್ತರಹುದು
ಹೊಳೆಗೆ ಒಲಿಯೆ ಮನ ಹೊಳೆಯು ಹಾಗೆ ಬಗೆ ಭಾವ ಹೊಳೆಸುತಿಹುದು ||
ಬೆಟ್ಟಹೊಳೆಯು ಬಿಟ್ಟಿರದು ನಿನ್ನ ಬಗೆ ಎಂಥ ಭವ್ಯ ರುಚಿಯು
ಕಡಲಿನಂತೆ ಗಂಭೀರಗುಂಭ, ಸೌಂದರ್ಯದಂತೆ ಶುಚಿಯು ||

**ಮಂದಾಕ್ರಾಂತ :**

ಆ ವಿರಹ ಅಲಸ ಗುರುಪದಗಳಿಂದ ಲೀಲಾಲೋಲವಾಗಿ
ಆಕ್ರಾಂತವಾಗಿ ಉತ್ಕಂಠೆಯಿಂದ ಲಘು ಪದಗಳಿಂದ ಸಾಗಿ ॥
ಮುಗಿತಾಯದಲ್ಲಿ ಗುರುಲಘುಗಳಿಂದ ದಿಂಕಿಡುವ ಹಾಗೆ ನೂಂಕಿ
ಮಂದಾಕ್ರಾಂತದಲಿ ವಿರಹಿ ಹೃದಯವನು ಸುಡುವದಣ್ಣ ಬೆಂಕಿ ॥

ಜಲದ ಭಾರದಲಿ ಜಲದ ಬಾನಿನಲಿ ಮಂದಮಂದವಾಗಿ
ಗಾಳಿಯಿಂದ ಆಕ್ರಾಂತವಾಗಿ ಗುಡುಗುಡುಗಿ ದೂಡಿ ನೂಗಿ ॥
ನದಿಗಾಗಿ ನಡೆದು ಬೆಟ್ಟಕ್ಕೆ ತಡೆದು ನಗರಿಯಲಿ ಮೋದವಡೆದು
ಸಾಗುತಿಹುದು ಮಂದಾಕ್ರಾಂತ–ರಸ ವಿರಹಿಛಂದ ಹಿಡಿದು ॥

**ಬೇರೆ ದೂತಕಾವ್ಯಗಳು:**

ನಿನ್ನ ದೂತ–ಪಾದಗಳ ಮುಟ್ಟಿಕಟ್ಟಿದರು ಕಬ್ಬವೊಂದು
ನಿನ್ನ ಭಾವ ಬೆನ್ನಟ್ಟಿ ಕಂಡರೋ ಯಾರೊ ಹಬ್ಬವೆಂದು ॥
ನಿನ್ನ ದೂತಗರಿ ಗರುಡನಿದಿರು ಕಳುಹುವರೆ ಗುಬ್ಬಿಯೊಂದು
ಅಂಚೆ ಕೊಂಚೆ ಶುಕ ಕಾಕ ಕೋಕ ಬಕ ಕೇಕಿ ಭೇಕಿ ಎಂದು ॥

**ಭಾಷಾಂತರವಲ್ಲ, ಭಾವಗ್ರಹಣ :**

ಕವಿಯ ಕಮಲಕೃತಿಯಲ್ಲಿ ಉಂಡೆ ನಾನೊಬ್ಬ ಭಾವಭೃಂಗ
ಪಕಳೆಮಾತು ಉದಿರಾಡಬಹುದು, ತುಂಬೀತು ಸ್ವಾಂತರಂಗ ॥
ತೋಳುಗೀಳು ಸಡಲೀತು ಪ್ರಿಯರ ಸುಸ್ನಿಗ್ಧ ಬಂಧದಲ್ಲು
ಪ್ರಾಣತುಂಬುವಾ ಅಧರಪಾನ ಇಳಿದೀತೆ ಉದರದಲ್ಲು ?

# ಪೂರ್ವಮೀಮಾಂಸೆ

ಕಾಮಸ್ತದಗ್ರೇ ಸಮವರ್ತತಾಧಿ
ಮನಸೋ ರೇತಃ ಪ್ರಥಮಂ ಯದಾಸೀತ್ ।
ಸತೋ ಬಂಧುಮಸತಿ ನಿರವಿಂದನ್
ಹೃದಿ ಪ್ರತೀಷ್ಯಾ ಕವಯೋ ಮನೀಷಾ ॥

ಋ. ೧೦. ೧೨೯. ೪.

ನಿವರ್ತಸ್ವ ಹೃದಯಂ ತಸ್ಯತೇ ಮೇ ।

ಋ. ೧೦. ೯೫. ೧೭.

# ನಮನ

ನಮೋ ಎಂಬೆ ಕವಿಗುರುವೆ ತಣಿಸಿತೋ ಅಮರ-ದೂತ-ಮೇಘಾ
ನಿನ್ನ ಇನಿಯಳಂತೆಯೇ ನನ್ನನೂ ದಿವ್ಯ ಕಾವ್ಯದೋಘಾ ||
ಇಂದ್ರಮಾಯೆಯನು ಭಾವಛಾಯೆಯನು ನೂರು ಕಡೆಗೆ ಚೆಲ್ಲಿ
ಅಮೃತಗರೆವುದಿದು ರಸಿಕಹೃದಯದಲಿ ದಿಗ್‌ದಿಗಂತದಲ್ಲಿ ||

# ಕನ್ನಡ

# ಮೇಘದೂತ

## ಪೂರ್ವ ಮೇಘ

೧

ಒಬ್ಬ ಯಕ್ಷ ತನ್ನೊಡೆಯನಿಂದ ನಲ್ಲೆಯನು ಅಗಲಿ ಬೆಂದು
ಶಪಿತ ವರುಷವನು ಕಳೆಯಲಾಗದೇ ಮಹಿಮೆ ಕಳೆದುಕೊಂಡು ||
ಜನಕತನಯೆ ಮಿಂದುದಕಗಳಲಿ ತಣ್ಣೆಳಲ ಅಂಗಳಲ್ಲಿ
ವಸತಿ ನಿಂದನೋ ರಾಮಗಿರಿಯ ಪುಣ್ಯಾಶ್ರಮಂಗಳಲ್ಲಿ ||

೨

ಅಗಲಿ ಇದ್ದರೂ ಆಸೆಗೊಂಡಿರಲು ಗಿರಿಯೊಳಂತು ಇಂತು
ಕೆಲವೆ ತಿಂಗಳಲಿ ಚಿನ್ನ ಕಡಗ ಮೊಳಕೈಗೆ ಸರಿದು ಬಂತು ||
ಕಾರಹುಣ್ಣಿಮೆಯ ಮಾರನೆಯ ದಿನವೆ ಮೋಡ ಕೋಡನಪ್ಪಿ
ಕಂಡಿತೊಡ್ಡಿನೊಡ ಡಿಕ್ಕಿಯಾಡುವಾ ಆನೆ ಬೆಡಗನೊಪ್ಪಿ ||

೩

ಮೋಡ ನೋಡಿ ಮನಸಾಗಿ ನಿಂತನೋ ಹೇಗೊ ಏನೊ ಕಂಡು
ರಾಜರಾಜನನುಚರನು ಇದ್ದ ಕಣ್ಣೀರ ನುಂಗಿಕೊಂಡು ||
ಮೋಡ ಕಂಡೊಡನೆ ಬೇರೆ ಬಗೆಯಹುದು ಸುಖಿಗು ಎಂತೊ ಏಕೋ
ಕೊರಳ-ಗೆಳತಿ ದೂರುಳಿದ ಮೇಲೆ ಆ ಗತಿಯ ಹೇಳಲೇಕೋ ||

೪

ಬಂತು ಶ್ರಾವಣಾ ಎಂತು ಬದುಕುವಳೊ ಮಡದಿ ಜೀವ ಉಳಿಸಿ
ಮೋಡದೊಡನೆ ತನ್ನೊಳಿತಿನೊಸಗೆಯನು ಅಂತೆ ಕಳಿಸಲೆಳಸಿ ||
ಬೆಟ್ಟ-ಮಲ್ಲಿಗೆಯ ಹೊಚ್ಚ ಹೂವಿನೊಡ ಕಾಲನೀರ ನೀಡಿ
ಇದಿರುಗೊಂಡು ಬರಮಾಡಿಕೊಂಡ ಒಲಿದೊಲಿವ ಮಾತನಾಡಿ ||

೫

ಗಾಳಿ- ನೀರು-ಉಗೆ-ಬೆಂಕಿಗೂಡಿ ಆಗಿರುವ ಮೇಘವೆತ್ತ
ಎತ್ತ ಮಾತುಗಳು? ಮೋಡ ಜೀವವೇ? ಏನೊ ಎತ್ತೊ ಚಿತ್ತ ||
ಭೇದವೆಣಿಸದೆಯೆ ಕಂಡ ಮೋಡವನೆ ಬೇಡಿಕೊಂಡ ತಾನು
ಜಡವೊ ಚೇತನವೊ ಬಯಕೆ ಮರುಳರಿಗೆ ಯಾವ ವಸ್ತುವೇನು? ||

೬

ಪುಷ್ಕರಾದಿ ಜಗ ಬಲ್ಲ ವಂಶದವನಲ್ಲೆ, ಬಲ್ಲೆ ನಾನು
ಕಾಮರೂಪಿಯೇ ಪ್ರಕೃತಿಪುರುಷನೋ ಇಂದ್ರನಲ್ಲಿ ನೀನು ||
ದೈವ-ಬಂಧು ನೀ. ಬೇಡೆ ಕೆಡುಕರಲಿ. ಬಯಕೆಗೂಡಿಯೇನು?
ಲೇಸು ಒಳ್ಳ್ಯವರ ಬೇಡಿಕೊಂಬುದೇ ವ್ಯರ್ಥವಾದರೂನು ||

೭

ನೀರೆ ಕಾದವಗೆ ಶರಣು ಅಲ್ಲವೇ?. ಇನಿಯಳೆಡೆಗೆ ಓತು
ಒಯ್ಯೊ ಧನಪತಿಯ ಮುನಿಸಿಗೀಡಾಗಿ ಅಗಲಿದವನ ಮಾತು ||
ಯಕ್ಷರಾಜನಾ ರಾಜಧಾನಿ ಅಲಕೆಗೆಯೆ ಹೋಗು ನೀನು
ಅಲ್ಲಿ ಶಿವನ ಮುಡಿಚಂದ್ರ ತೊಳಿವ ಮಹಮನೆಯ ಮಾಟವೇನು? ||

೮

ಗಾಳಿ ಬಟ್ಟೆಯಲಿ ಬರವ ಕಂಡು ಕುರುಳೋಳಿ ಓರೆಮಾಡಿ
ದೂರ ಹೋದವರ ಹೆಣ್ಣು ನೋಡುವವು ನಿನ್ನನಾಸೆ ಗೂಡಿ ॥
ನೀನೆ ಬರಲು ಅವನಾವನಿರುವನೋ ನಲ್ಲೆ ಬಿಟ್ಟುಗೊಟ್ಟು,
ಬೇರೆಯವರ ಆಳಾಗಿ ಇರುವ ನಮ್ಮಂಥ ಜನರ ಬಿಟ್ಟು ॥

೯

ಗಾಳಿ ಬೀಸುವದು ನಿನ್ನ ನೂಕಿಸುತ ಮಂದ ಮಂದವಾಗಿ
ಚೂಚು ಚಾಚಿ ಚಾದಗೆಯು, ಎಡಕೆ ಕೂಗುವದು ಚೆಂದವಾಗಿ ॥
ಬಸೆಯ ನೆನೆದು ಬೆಳ್ಳಕ್ಕಿ ಬರುವವೋ ಸಾಲು ಸಾಲುಗೊಂಡು
ಬೆನ್ನಗಟ್ಟುವವು ಕಣ್ಗೆ ಸೊಬಗ ನೀ ತಂದೆ ಎಂದುಕೊಂಡು ॥

೧೦

ಎಷ್ಟು ದಿವಸ ಇನ್ನುಳಿದುವೆಂದು ದಿನದಿನವು ಲೆಕ್ಕವಾಗಿ
ಜೀವ ಹಿಡಿದುಕೊಂಡಿರುವ ನಿನ್ನ ಅತ್ತಿಗೆಯ ನೋಡು ಹೋಗಿ ॥
ನಾರಿ ಹೃದಯದಲಿ ನಾರಿನೆಳೆಯವೊಲು ಇಹುದು ಆಸೆಯೊಂದು
ಅಗಲಿದಾಗಲೇ ಕಳಚಿ ಬೀಳುವೆದೆ—ಹೂವ ಬಿಗಿದುಕೊಂಡು ॥

೧೧

ಮೊದಲ ಮೊಳಗಿಗೇ ಬಂಜುಗೆಟ್ಟಿತೋ ಭೂಮಿ ಅಣಬೆತಾಳಿ.
ಕಿವಿಗೆ ಸವಿಯೆನಿಸುವ ಮೊಳಗ ಕೇಳಿ ಮಾನಸಕೆ ಬಂತು ದಾಳಿ ॥
ತುಂಡು ತಾವರೆಯ ಬುತ್ತಿ ಕಟ್ಟಿ ಕೈಲಾಸಕಾಗಿ ಸಾಗಿ
ಬಾನ ಬಯಲಿನಲಿ ಕೊನೆಗು ಬರುವವರಸಂಚೆ ಜೋಡಿಯಾಗಿ ॥

೧೨

‘ ಹೋಗಿ ಬರಲೊ ’ ಎಂದಪ್ಪಿ ಕೇಳು ಈ ಮುದ್ದು ಗೆಳೆಯನನ್ನು
ರಾಮಪಾದಗಳು ಮುದ್ದಿ ಮುದ್ರಿಸಿದವಿದರ ಮಗ್ಗುಲನ್ನು ||
ಕಾಲ ಕಾಲಕೂ ನಿನ್ನ ಕಂಡು ಇದು ಮೈಯನರಳಿಸುವದು
ಅಗಲಿ ಬಲು ದಿನಕೆ ಬಂದೆ ಎಂದು ಬಿಸಿ ನೀರನುರುಳಿಸುವದು ||

೧೩

ಹಾದಿ ಹೇಳುವೆನು ಕೇಳು ನಿನಗೆ ಅನುಕೂಲ ಪಯಣಕಾಗಿ
ಬಳಿಕ ನನ್ನ ಸಂದೇಶ ಕಿವಿಗೆ ಪರಿಣಮಿಸಲಮೃತವಾಗಿ ||
ತೊಳಲಿ ಬಳಲಿ ಗಿರಿ ಶಿಖರಗಳಲಿ ಕಾಲಿಟ್ಟು ಸಾಗುವಾಗ
ದಣಿವ ತವಿಸು, ನೀರಿನಿಸೆ ಸವಿಸಿ ಆ ಹಳ್ಳ-ಕೊಳ್ಳದಾಗ ||

೧೪

ಗಿರಿಯ ಶೃಂಗವೇ ಹರಿದು ಹೋಗುವದೊ ಏನೊ ಎಂಬುದಾಗಿ
ಗಾಳಿ ಬೀಸುತಿರೆ ಸಿದ್ಧ-ಮುಗ್ಧೆಯರು ನೋಡೆ ಚಕಿತರಾಗಿ ||
ಹಾರು ಬಡಗಣಕೆ ನೀರ-ನಿಚುಲನಡೆಯಿಂದ ಮೇಲೆ ಅತ್ತ
ಹಾದಿಯಲ್ಲಿ ದಿಙ್ನಾಗ ಬೀಸಿದಾ ಕರವ ತಪ್ಪಿಸುತ್ತ ||

೧೫

ಏಳು ರತುನಗಳ ಮೇಳಕೂಡಿ ಕಂಗೊಳಿಸುವಂತೆ ಮುಂದು
ಹುತ್ತದಿಂದ ಎದ್ದಿರುವದಲ್ಲಿ ಅಗೊ ಇಂದ್ರಧನುವದೊಂದು ||
ನಿನ್ನ ಕಪ್ಪು ಮೈಗದರ ಒಪ್ಪ ಬರಲೇನು ಕಾಂತಿ ಬಂತು
ಗೋಪವೇಷದಾ ವಿಷ್ಣು ಗರಿಯು ಧರಿಸಿರಲು ಕಾಣುವಂತು ||

೧೬

ಕುಡಿದು ಬಿಡುವರೋ ಕಣ್ಣ ಕುಡಿಗಳಲಿ ಬೆಳೆಗೆ ಬಂಧು ಎಂದು
ಹುಬ್ಬ ಹಾರಿಸುವ ಬಿಂಕವಿಲ್ಲದಾ ಹಳ್ಳಿ ಹೆಂಗಳಂದು ||
ಅದೇ ಹರಗಿ ನೆಲಗಂಪ ಹರಹುವಾ ಹೊಲದ ಮಾಳವೇರಿ
ಸೀರ ತಳಿಸಿ ಹಗುರಾಗಿ, ಉತ್ತರಕೆ ಮತ್ತೆ ಹೋಗು ಸಾರಿ ||

೧೭

ಮಾವುಮಲೆಯ ಕಡು ಕಾಡಬೇಗೆ ತವಿಸಿದ್ದೆ ಮಳೆಯ ಸುರಿಸಿ
ತಣಿಸದಿರುವದೇ ದಾರಿದಣಿವಿಕೆಯ, ಅದುವು ಕೆಳೆಯ ಸ್ಮರಿಸಿ ||
ಎಂಥ ಕಿರುಕುಳನು ಮೊದಲು ಮಾಡಿದುಪಕಾರ ಮರೆಯಬಹುದೇ
ಎಂದ ಮೇಲೆ ಅವನಂಥ ದೊಡ್ಡವನು ವಿಮುಖನಾಗಲಹುದೇ ||

೧೮

ತೊಳೆದ ತುರುಬು ಕಪ್ಪಾದ ನೀಸು ಗಿರಿಶಿಖರವಲ್ಲಿ ತೇಲೆ
ಆಷಾಢ ಮಾವು ಸುರಿದಾವು ಗೊಂಚಲಲಿ ಬೆಟ್ಟದೆದೆಯಮೇಲೆ ||
ಅಮರ ಮಿಥುನಗಳ ಪ್ರಣಯ-ದೃಷ್ಟಿ ಅರಳರಳುವಂತೆ ಆಗೆ
ಮಲೆಯ ತುದಿಯು ಕಪ್ಪಾಗೆ ತೋರುವದು ನೆಲದ ಮೊಲೆಯ ಹಾಗೆ ||

೧೯

ಕಾಡ ಹುಡುಗಿಯರ ಆಟ ನಡೆದ ಎಲೆಮಾಡಗಳಲಿ ತಂಗಿ
ನೀರ ಸುರಿಸಿ ತುಸು ಮುಂದುವರಿಸು ಆ ದಾರಿ ದಾಟಿ ಹಿಂಗಿ ||
ವಿಂಧ್ಯದಡಿಗೆ ಕಡುಬಂಡೆಯೊಡೆದು ಹರಿದಿರುವ ರೇವೆ ನೋಡು
ಚಿತ್ರ ಚಿತ್ರ ಸಿಂಗಾರವಾದ ಮದ್ದಾನೆ ಹಣೆಗೆ ಜೋಡು ||

೨೦

ಅಲ್ಲಿ ಕಾಡು ಮದ್ದಾನೆಯಿಂದ ಬಹು ಗಂಧ ನೀರ ಕುಡಿದು
ಮುಂದೆ ಹೋಗು ನೇರಿಳೆಯ ತಡೆವಡೆದು ನಿನ್ನ ದಾರಿ ಹಿಡಿದು ||
ತುಂಬು ಮೋಡವೆ, ಗಾಳಿ ಈಡೆ ? ನಿನಗಾರು ತೂಗಬಹುದು ?
ಬರಿದು ಆಗಿ ಹಗುರಾದ; ತುಂಬಿದವ ಮಾನವಂತನಹುದು ||

೨೧

ಹಸಿರು ಹಳದಿ ಕಪ್ಪಾದ ಮುಗುಳ ಕಡವಾಲಗಳನು ನೋಡಿ
ನೀರ ಸೆರೆಯ ಕಲ್ಬಾಳೆ ತಲೆಯನೆತ್ತಿದವು ಹೂವು ಮೂಡಿ ||
ಮೆಯ್ಯು ಜಗಿದು ಅಡವಿಯಲಿ, ನೆಲದ ಕಡುಗಂಪ ಮೂಸಿ ಹೀಳಿದು
ಸಾರಂಗ ಜಾತಿ ಸುತ್ತಾಡತಾವ ಇಳಿಮಳೆಯ ಹಾದಿ ತುಳಿದು ||

೨೨

ಎಷ್ಟು ಬೇಗ ನೀ ಹೋಗಬೇಕು ನನಗಾಗಿ ಎನಿಸಿ ಏನು ?
ಬೆಟ್ಟ ಬೆಟ್ಟ ಬಿಟ್ಟಿರುವ ಮಲ್ಲಿಗೆಯ ಜೊತೆಗೆ ಉಳಿವೆ ನೀನು ||
ಇಷ್ಟು ತಿಳಿಯೆನೇ ? ಕಣ್ಣು-ತುಂಬಿ ಕುಡಿಗಣ್ಣ ಚಾಚಿ ಕೇಕಿ
ಕೇಕೆ ಹಾಕುತಲೆ ಹೇಗೊ ಹೊರಡುವೀ ಹಿಂದುಮೆಟ್ಟು ನೂಕಿ ||

೨೩

ಮುಳ್ಳುಮೊನೆಯ ಕೇದಿಗೆಯ ಹಳದಿ ನೆರಳುಳ್ಳ ತೋಟವಳ್ಳಿ
ಊರ ತಿರಿವ ಕಾಕಗಳ ಬಸದಿಗಳ ಹಾದಿಗಿಡದ ಹಳ್ಳಿ ||
ಮಳೆಯ ವಾಸದಲಿ ಜಂಬು-ನೇರಿಳೆಯು ತುಂಬಿ ಬನಗಳಲ್ಲಿ
ಕೆಲವೆ ದಿವಸ ಆ ಹಂಸಗಳಿಗೆ ನೆಲೆ ಆ ದಶಾರ್ಣದಲ್ಲಿ ||

೨೪

ದಿಕ್ಕು ದಿಕ್ಕಿನಲಿ ವಿದಿಶೆಯೆಂದು ಹೆಸರಾದ ರಾಜಧಾನಿ
ಅಲ್ಲಿ ಹೋಗಿ ಬಯಬಯಸಿದಂಥ ಹಣ್ತಿನ್ನು ಕಾಮುಕಾ, ನೀ ||
ಹುಬ್ಬು ಮುರಿವ ಬೆಡಗುಳ್ಳ ಮುಖಕೆ ಸರಿ ವೇತ್ರವತಿಯ ನೀರು
ಅವಳ ಬಳಿಗೆ ಗುಡುಗುಡಿಸಿ ಸೊಬಗ, ನೀನವಳ ಸವಿಯ ಹೀರು ||

೨೫

ನೀನು ಮುಟ್ಟೆ ಮೈಜುಮ್ಮು ತಟ್ಟಿತೋ ಅಗಲಹೂವ ತೆರೆದು
ನೀಚಗಿರಿಯ ಕಡವಾಲ ಇಹವು ಹೋಗಲ್ಲಿ ಸುಂದು ಬಿರಿದು ||
ಅಲ್ಲಿ ನಲ್ಲ-ಬೆಲೆವೆಣ್ಣ-ಕೂಟ ಹೊಸಗಂಪನುಗುಳುತಿಹವು
ನಾಗರಿಕರ ತಾರುಣ್ಯಮದವ ಕಲ್ಮಾಡ ಹೊಗಳುತಿಹವು ||

೨೬

ಅಲ್ಲಿ ತಂಗಿ ಮುಂಬರಿಯೊ ಕಾಡ-ಹೊಳೆ-ದಂಡೆ-ತೋಟದಲ್ಲಿ
ಬಳ್ಳಿ ಬಳ್ಳಿ ಹೂಜಲ್ಲಿಯಲ್ಲಿ ಮುಂಬನಿಯ ತುಳುಕಿ ಚೆಲ್ಲಿ ||
ಗಲ್ಲ ಬೆವರೆ, ಕಿವಿಕಮಲ ಕಮರೆ, ಪಾಮರರ ಅಮರಿಯರಿಗೆ
ನಿನ್ನ ನೆರಳ ಕ್ಷಣವಿತ್ತು, ರಮಿಸು ಹೂದೋಟಗಿತ್ತಿಯರಿಗೆ ||

೨೭

ಉತ್ತರಕ್ಕೆ ಹೊರಟವಗೆ ಉಜ್ಜಯಿನಿ ಅಡ್ಡನಾದರೇನು ?
ಅಲ್ಲಿ ಮೇಲುಮಾಳಿಗೆಯ ಭೋಗ ಕಳಕೊಳ್ಳಬೇಡ ನೀನು ||
ಆ ಊರ ಹೆಂಗಸರ ಕಣ್ಣಬಳಿ ಮಿಂಚಿ ಮಿಣುಕು ಎನ್ನು
ಅವರ ಕಣ್ಣ-ಕುಡಿ-ಲಲ್ಲೆಯೊಲ್ಲೆಯಾ ? ವ್ಯರ್ಥ ಇದ್ದು ಕಣ್ಣು ||

೨೮

ನಿನ್ನ ಕಂಡು ನಿರ್ವಿಂಧ್ಯೆ ಮುಂದೆ, ತೆರೆ ತೆರೆದು, ಅಂಚೆ ಉಲಿಸಿ
ಗೆಜ್ಜೆಪಟ್ಟೆ ಗಿಲುಕೆನಿಸಿ, ಎಡವಿ, ಸುಳಿನಾಭಿ ತೋರಿ ನಲಿಸಿ— ||
ಹಾದಿಯಲ್ಲಿ ಬರೆ, ಆಗು ಸಮರಸಿಯು ಕೇಳಬೇಡ ಬದಲು
ಹೆಣ್ಣಿನೊಲವಿನಲಿ ಮಳ್ಳ ಮುರುಕವೇ ಮಾತಿಗಿಂತ ಮೊದಲು ||

೨೯

ಹೆಳಲು ಇಳಿದು ಒಕ್ಕಾಲು ಉಳಿದು, ನಡೆದಿಹಳು ತೆಳ್ಳಗಾಗಿ
ಪಡದ ಮರದ ಒಣ ಎಲೆಗಳುದುರಿ ತನ್ನುದರ ಬೆಳ್ಳಗಾಗಿ ||
ನೀನು ಸೊಬಗ, ನಿನ್ನಿಂದ ಅಗಲಿ ತಾ ಸೊರಗಿ ಸಣ್ಣಗಹಳು
ದೈವದಿಂದ ನಿನ್ನನ್ನು ಸೇರಿ ಮೈದುಂಬಿಕೊಳ್ಳಬಹಳು ||

೩೦

ಬಂದವಂತಿನಾಡಿನಲಿ ಉದಯನನ ಕಥೆಯು ಬಲ್ಲರೆಲ್ಲಿ
ಅಲ್ಲಿ ಸಿರಿಯು ಹರಹಿರುವಪೂರ್ವಪುರವಿಹುದು ನಿಲ್ಲು ಅಲ್ಲಿ ||
ಪುಣ್ಯವಂತರೋ, ಪುಣ್ಯತೀರಲಿರೆ ಸ್ವಲ್ಪ ಉಳಿಯಲಾಗ
ಸ್ವರ್ಗದೊಂದು ತುಣುಕನ್ನೆ ತಂದರೋ ಇಳೆಗೆ ಇಳಿಯುವಾಗ ||

೩೧

ಮತ್ತ ಹಂಸಗಳ ಮತ್ತಿಸುಲಿವನೇ ಮತ್ತೆ ಎಳೆದು ಬಳಸಿ
ಬೆಳಗಿನಲ್ಲಿ ಅರಳಿರುವ ತಾವರೆಯ ಕಂಪಕೆಳೆಯ ಬೆಳಿಸಿ ||
ಸುಸಿಲಿನಲಸಿಕೆಯ ಕಳೆವುದಲ್ಲಿ ಶಿಪ್ರಾ ವಾತವಂತೆ
ಮಧುರವಾಗಿಯೇ ಚದುರನಾಡುತಿಹ ಬಲ್ಲ ನಲ್ಲನಂತೆ ||

೩೨

ಕೇಶ-ಧೂಪ ಎಳೆದಾವು ನಿನ್ನ. ಬೆಳಕಂಡಿಯಿಂದ ಹರಿದು
ನೀಲಿಬಣ್ಣ ನೀನಣ್ಣ, ನವಿಲು ನಲಿದಾವು ಕುಣಿದು ಕರೆದು ||
ಅಲಸುಗಳೆಯೊ, ಆ ಕಂಪು ಮಾಡಗಳಲೇನು ಇಂದ್ರಮೋಡಿ
ಪಡೆದು ನೀರೆಯರು ಬಣ್ಣ ಬೆಳೆದು ಅಂಗಾಲ ಪದ್ಮ ಮೂಡಿ ||

೩೩

ರುದ್ರ-ಗಣವು ಬಾಗೀತು ನಿನಗೆ, ಹೇ ಕೊರಳಗರಳ ವರಣಾ
ಕಾಣು ಹೋಗು ಶ್ರೀ ಚಂಡಿಪತಿಯ ಮಾಂಕಾಳ ಪುಣ್ಯ ಚರಣಾ ||
ವನ ತೋಟದಲಿ ಗಾಳಿ ತೀಡುವದು ಗಂಧವತಿಯನೆರೆದು
ಮಲಗಂಧಿಯರು ಮಿಂದ ನೀರಿಗರವಿಂದಗಂಧ ಬೆರೆದು ||

೩೪

ನ್ನ ಕಣ್ಣ ಹೊಲದಾಚೆಗಾಗಿ ರವಿ ತಣ್ಣಗಿರುವವರೆಗೂ
ಳ್ಳಿಪಳ್ಳಿ ತರಹರಿಸಬೇಡ, ಇರು ಅಲ್ಲಿ. ಬೈಗ ಮರೆಗೂ ||
ವ-ಸೇವೆ ನಡೆದಾಗ ಸಂಜೆ ದುಂದುಭಿಯ ಮೊಳಗು ನೀನು
ಜ್ಯನಸ್ತುವಿನ ಪೂಜೆಗೊದಗದಾ ನಾದವಿದ್ದು ಏನು ? ||

೩೫

ವದಾಸಿಯರು ಹೆಜ್ಜೆ ಹಾಕಿ, ನಡುಗೆಜ್ಜೆ ಕುಣಿಸಿ ನವುರಿ,
ತೋಳು ಬಳುಕಾಡೆ ಬೀಸುವರು ರನ್ನ-ಗಾವಚವರಿ ||
ನ್ನ ಮೊದಲ ಹನಿ ಉಗುರು-ತಾಣ ತಂಗೊಳಿಸೆ ಎದೆಯ ತಾಗಿ
ನೋಟ ಬೀರುವರು ನಿನ್ನ ಕಡೆಗೆ ತುಂತುಂಬಿ ಮಾಲೆಯಾಗಿ ||

೩೬

ಬಳಿಕ ಬೆಳೆದ ಉದ್ದುದ್ದ ತೋಂಗೆ ಮರದುದಿಗಳಲ್ಲಿ ಒರಗಿ
ಸಂಜೆಗೆಂಪು–ದಾಸಾಳಬಣ್ಣದವನಾಗಿ ನೀನು ಮೆರುಗಿ ||
ಶಿವನು ಕುಣಿಯಲಿರೆ ಅವನ ತೊಡೆಯ ಹಸಿ ತೊವಲಿನಂದ ಮುಚ್ಚಿ
ಮಾಡು ಅವನ ಸತಿ ನೋಡುವಂತೆ ದೃಢ ಭಕುತಿಯಿಂದ ಮೆಚ್ಚಿ ||

೩೭

ರಮಣರತ್ತ ಉಜ್ಜಯಿನಿ–ರಮಣಿಯರು ಹೊರಟ ರಾತ್ರಿಯಲ್ಲಿ
ರಾಜಬೀದಿ ಕಗ್ಗತ್ತಲಾಗಿ ಕಂಗೆಡಿಸೆ, ಮಿಂಚ ಚೆಲ್ಲಿ ||
ದಾರಿದೋರು ಹೊಂಬೆಳಕ ಮಾಡಿ ಮಳೆ ಗುಡುಗು ಬೇಡೊ ಮೇಘಾ
ಮೊದಲೆ ಹೆದರಿದವರವರೊ, ಕಳುವಿನಲಿ ಹೋಗಬೇಕು ಬೇಗಾ ||

೩೮

ಪಾರಿವಾಳ ಹಲವಾರು ಮಲಗಿದೇಳನೆಯ ಮಾಡದೊಳಗೆ
ಮಿಂಚು ಮಡದಿ ಬಳಲಿರುವಳೇನೊ! ಮಲಗಲ್ಲಿ ಬೆಳ್ಳಬೆಳಗೆ ||
ಮುಂದೆ ದೂಡುವದು ನಿನ್ನಸುದಯದಲಿ ನಮ್ಮ ನಿಮ್ಮ ನಂಟೇ
ಗೆಳೆಯಗಾಗಿ ಕೈಕೊಂಡ ಕೆಲಸವನು ನಡುವೆ ಬಿಡುವರುಂಟೇ ||

೩೯

ಒಂಟಿಯಾಗಿ ಇರುಳುದ್ದ ಕಳೆದ ಸತಿಗಾಗಿ ರವಿಯು ಬಹನು
ಸಾವಿರಾರು ಕರ ಚಾಚಿ ಕಮಲೆಯರ ಕಣ್ಣನೊರೆಸಲಿಹನು ||
ತನ್ನ ಹೆಂಡಿರನು ತಾನೆ ತವಿಸದಿನ್ನಾರು ಶಮಿಸಲಹುದು
ಅಡ್ಡ ನೀನು ಇರಬೇಡ ರವಿಗೆ; ಅವ ಕೆಂಡವಾಗಬಹುದು ||

೪೦

ಹೆಸರಿನಂತೆ ಗಂಭೀರೆ ಧೀರೆ ತಿಳಿ ನೀರೆ ಜಲಪೊಳವಳ
ಸೇರಬಲ್ಲೆ ನೆರಳಾದರೇನು? ಸರಿ, ನೀನು ನೀರಸಿವಳ ||
ಅವಳು ನೋಡುವಳು ಚಪಳ ಮೀನ ಚಳಕುಮುದ ನೇತ್ರಿಯಾಗಿ
ತಿರುಗಿ ನೋಡು ಇಹಳವಳು ನಿನ್ನ ಅನುರೂಪ ಕ್ಷೇತ್ರವಾಗಿ ||

೪೧

ಕೈಯ ಚಾಚಿ ತಡೆವಂತೆ ನಾಚಿ ನೀರ್ಜೆತ್ತ ಬಾಗಿ ಎಳೆದು
ಹಿಡಿದರೇನವಳ ಮುಗಿಲ ಬಣ್ಣದಾ ಮುಂಜುಸೀರೆ ಸೆಳೆದು ||
ಒಯ್ಯೊ ನಿನ್ನ ಜೊತೆಗಿರಲಿ, ಮೇಘವೇ, ಪಯಣ ಬೆಳೆಸುವಾಗ
ಉಂಡು ಒಮ್ಮೆ ಬಿಡಬಹುದದಾರು ಬರಿ ಒಜ್ಜ ಚೆಲುವು ಭೋಗ ||

೪೨

ನಿನ್ನ ಉಸಿರ ಹನಿ ಸೋಕಿ, ನೆಲದ ಸರುಗಂಪು ಹೊಮ್ಮಿ ತಾಗಿ
ಬಂದ ಗಾಳಿ ಕುಡಿದಾನೆ ತಾನೆ ಹರಿ ಮೂಗೆ ಸೊಂಡಿಲಾಗಿ ||
ಕಾಡ ಅತ್ತಿ ಹಣ್ಗೊಳಿಸುವಂಥ ತಂಗಾಳಿ ಇದಿರು ಬಂದು
ದೇವಗಿರಿಯ ಸೇರಿಸುವದಣ್ಣ, 'ಬಿಜ ಮಾಡಿ ತಾವು' ಎಂದು ||

೪೩

ಈ ಗಿರಿಯ ಜೀವ, ಆ ಸ್ಕಂದದೇವ. ಅಭಿಷೇಕ ಮಾಡು ಬಾಗಿ
ಹೂಮೋಡದಿಂದ ಹೂಮಳೆಯ ಸುರಿಸು ನೀ ಬಾನಗಂಗೆಯಾಗಿ ||
ಸುರರಾಜ್ಯಸೈನ್ಯ ರಕ್ಷಣೆಗೆ ಬಂದ ಶಿವವೀರ್ಯದೊಂದು ಮೂರ್ತಿ
ಅವ ಮಿಗಿಲು ಹಗಲಿಗೂ. ಉರಿಯ ಕಂದ. ಕಿರುಕುಳವೆ ಅಂಥ ಕೀರ್ತಿ ||

೪೪

ಉದುರಿದ್ದ ನವಿಲಗರಿ ಮುತ್ತಿ ಎತ್ತಿ ಕಣ್ಗೊತ್ತಿ ಶಿವೆಯು ಕಿವಿಗೆ
ನೈದಿಲೆಯ ಬಳಿಗೆ ಇರಿಸುವಳು ಅವಳು ಮಗನೊಂದು ಮುದ್ದು ಸವಿಗೆ ||
ಶಿವಮೌಳಿ ಚಂದ್ರಕಳೆಗಿಂತ ಬೆಳ್ಳಗುಡಿಗಣ್ಣ ನವಿಲ ಕುಣಿಸು
ಆಗೊ ನಿನ್ನ ಮೊಳಗು, ಆ ಗುಡ್ಡದೊಳಗು, ನೊಲ್ಲಾಗುವಂತೆ ತಣಿಸು ||

೪೫

ಹರಶರಗಳಲ್ಲಿ ಹುಟ್ಟಿದ್ದ ದೇವನಾ ಸೇವೆಯಾಗೆ ಲೀಲೆ
ವರ ಸಿದ್ಧದ್ವಂದ್ವಗಳು ವೀಣೆಗೂಡಿ, ಮಳೆ–ಹಾದಿ ಬಿಟ್ಟ ಮೇಲೆ ||
ಗೋಯಾಗದೊಂದು ಅನುರಾಗದಿಂದ ಬರುವಲ್ಲಿ ಬಾರೊ ಸುರಿಯೆ
ಹಾತೊರೆವ ಚರ್ಮಣ್ವತಿ ರಂತಿದೇವನಾ ಕೀರ್ತಿಯಂತೆ ಮೆರೆಯೆ ||

೪೬

ಕೃಷ್ಣವರ್ಣವನೆ ಕಳವು ಮಾಡಿದಾ ಮೋಡ ನೀನು ತಗ್ಗಿ
ನದಿಯ ನೀರು ಕುಡಿವಾಗ ಕಾಣುವಿಯೊ, ಬಾನಿನಲ್ಲಿ ಹಿಗ್ಗಿ ||
ನೋಡಲಿರುವ ಆ ದೇವಜಾತಿಗಳ ಕಣ್ಗೆ ಜಾಲವಾಗಿ
ಭೂಮಿ ತೊಟ್ಟ ಅಣಿಮುತ್ತು ಹಾರದಲಿ ಇಂದ್ರನೀಲವಾಗಿ

೪೭

ಮುಂದೆ ದಶಪುರದ ಹೆಣ್ಣು ಹುಬ್ಬು ಕರೆಯುವದು ಲೋಲವಾಗಿ
ಎವೆಗಳಾಟದಲಿ ನೋಟವೆಸೆಯುತಿರೆ ಕಪ್ಪು ನೀಲವಾಗಿ ||
ಯಾರ ಕಣ್ಣು ಹೋಲುವವು ಮೊಲ್ಲೆಯೊಡನಾಡಿ–ತುಂಬಿಯನ್ನು
ಅವರ ಕಣ್ಣ ಕುತುಕಕ್ಕೆ ನೀಡು ನಿನ್ನಾತ್ಮಬಿಂಬವನ್ನು ||

೪೮

ಬಾರೊ ದಾಟಿ ಬ್ರಹ್ಮಾವರ್ತವನು ನಿನ್ನ ಛಾಯೆ ಚೆಲ್ಲಿ
ಎಲ್ಲಿ ಇಂದಿಗೂ ಹಿಂದಿನೆಲುಬು ಆ ಕುರುಕ್ಷೇತ್ರದಲ್ಲಿ ||
ಅರಸುಗಿರಸುಗಳ ಚೆಂಡು ಕಳೆದ ಗಾಂಡೀವಧನ್ವ ಅಂದು
ನೀನು ಕಮಲಗಳ ಸೆಳೆವ ಹಾಗೆ ಮಳೆ ಸೆಳಕಿನಿಂದ ಇಂದು ||

೪೯

ಮಡದಿ ರೇವತಿಯ ಮುಖವು ಮೂಡಿದಾ ಕಳ್ಳಹಾಲು ಕುಡಿದ
ಕೃಷ್ಣನಣ್ಣನಾ ಸಮರ ತೊರೆದು ಒಲಿದಿವಳ ದಂಡೆ ಹಿಡಿದ ||
ಕುಡಿಯೊ ನೀನು ಸರಸತಿಯ ನೀರು ಬಲರಾಮನನ್ನು ನಂಬಿ
ಬಣ್ಣವಿರಲಿ ಕರಿ; ಬೆಳ್ಳಗಾಗು ಒಳಗೆಲ್ಲ ಬೆಳಕು ತುಂಬಿ ||

೫೦

ಜನ್ಹುಕನ್ಯೆ ತೊರೆದಿಳಿದಳಣ್ಣ ಕನಖಲದ ಮಲೆಯ ಬಳಿಗೆ
ಸಗರ ಸಂತತಿಗೆ ಸ್ವರ್ಗದೊಂದು ಸೋಪಾನವಾಗಿ ಇಳೆಗೆ ||
ಗೌರಿ ಮುರಿವಳಬ್ಬಬ್ಬ ಹುಬ್ಬ--ಎನೆ ನಕ್ಕು ನೊರೆಗಳಿಂದ
ಜಗ್ಗುತಿಹಳು ಶಿವಜಡೆಯ ಚಂದ್ರಮಣಿ ಕೈಯ ತೆರೆಗಳಿಂದ ||

೫೧

ನೀನು ಬಾನಿನಲಿ ಕಾಲು ಸೋತು ಬರೆ, ಗಂಗೆ ಕುಡಿಯಲೆಂದು
ಸ್ವರ್ಗದಾನೆಯೋ ಸೊಂಡೆ ಚಾಚಿದೊಲು ಕಾಂಬೆ ನೋಟವೊಂದು ||
ಬೇರೆ ಕಾಣುವದು ನೋಟ. ನೀರಿನಲಿ ಛಾಯೆ ಮೂಡಿದಂತೆ
ಗಂಗೆಯನ್ನೆ ಮತ್ತೊಂದು ಕಡೆಗೆ ಆ ಯಮುನೆ ಕೂಡಿದಂತೆ ||

೫೨

ಮಂಜು–ಬೆಟ್ಟ ಮುಡಿಯೆಟ್ಟದಲ್ಲಿ ಕಸ್ತೂರಿ ಮೆಟ್ಟಿನಲ್ಲಿ
ಇಳೆಯ ತೊಳೆಯೆ, ಹೊಳೆಯಾಗಿ ಬರುವ ಸಿರಿಗಂಗೆ ಹುಟ್ಟಿನಲ್ಲಿ ||
ದಾರಿದಣಿವಿಕೆಯ ಕಳೆಯೊ ನೀನು ಆ ಕೋಡಿನಲ್ಲಿ ಕುಂತು
ಶಿವನ ನಂದಿ ಕೋಡೆತ್ತಿ ಹಿಡಿದ ಕರಿ ಮಣ್ಣಮುದ್ದೆಯಂತು ||

೫೩

ದೇವದಾರು ಮರ ತಾಕಲಾಡಿ, ದಾವಾಗ್ನಿ ಕಿಡಿಯು ಸೂಸೆ
ಹೊತ್ತಿ ಬಾಲ, ಸುತ್ತಾಡಿ ಚವರಿಮೃಗವೆತ್ತಿ ಬಾಲ ಬೀಸೆ ||
ಕುತ್ತದಲ್ಲಿ ಇರೆ ಸುರಿಸು ನೀರು; ಉರಿ ಈಡೆ ನಿನ್ನ ಮಳೆಗೆ ?
ಕಷ್ಟ ಕಳೆವುದೇ ಇಷ್ಟವಹುದು ಉತ್ತಮರ ಶಕ್ತಿಗಳಿಗೆ ||

೫೪

ಸಿಟ್ಟಿನಿಂದ ಸಿಡಿದೆದ್ದು ಶರಭ ಬರೆ ತಾಗಿ, ಕಂಡು ನಿದುವು.
ಮೂಳೆಗಳನು ಮುರಿಕೊಳ್ಳಲೆಂದು ಹವಣಿಸಿದ ಹಾಗೆ ಅದುವು ||
ಆಲಿಕಲ್ಲಿನಿಂದಿಟ್ಟು ಕುಟ್ಟು, ಅದರಂಥ ಮೂಢರೊಳರೇ ?
ಮುಗಿಲಿಗೆಂದು ಕೈ ಹಾಕಿ ಹಾರಿದರೆ ಕಾಲು ಮುರಿದು ಕೊಳರೆ ? ||

೫೫

ಅಲ್ಲೆ ಕಲ್ಲಿನಲಿ ಶಿವನ ಪಾದ ಮೂಡಿಹವು ಸಿದ್ಧರದನು
ಪೂಜಿಸುವರು ಎಂದೆಂದು, ಹೋಗು ಬಲವಂದು ಅಡುವೆ ಹದನು ||
ಕರಣವಳಿಯೆ, ಉರು ಪಾಪ ತೊಳೆಯೆ, ದಾಟುವರು ಸಾವಿನೆಲ್ಲೆ
ನಂಬಿದವರು ಗಳಿಸುವರು ಸ್ಥಿರದ ಗಣಪದವಿಯುನ್ನು ಇಲ್ಲೆ ||

೫೬

ತೂತು ಬಿದಿರು ಕೊಳಲಾಗಿ ಊದುತಿರೆ, ಗಾಳಿ ತೂರಿ ನೂಗಿ
ಶಿವನ ತ್ರಿಪುರ ಜಯಗೀತ ಹಾಡೆ ಕಿನ್ನರರು ದನಿಯ ತೂಗಿ ||
ನಿನ್ನ ಗುಡುಗು ಮದ್ದಳೆ ಮೃದಂಗದೊಲು ತುಂಬಿ ದರಿಯ ಜಾಡು
ಕೂಡಿದಂತೆ ಸರಿ, ಶಿವನ ನಾಟ್ಯಸಂಗೀತ ದೀಡು ಜೋಡು ||

೫೭

ಮಂಜು ಬೆಟ್ಟವನು ಮೀಟು, ಹಂಸದ್ವಾರವನು ದಾಟು ಓಡು
ಕ್ರೌಂಚ-ರಂಧ್ರದಲಿ ವೀರ ಭಾರ್ಗವನಪೂರ್ವಶೌರ್ಯ ನೋಡು ||
ಉತ್ತರಕ್ಕೆ ಹರಿ ಹಾಗೆ, ತೋರುತಿರೆ ನಿನ್ನ ರೂಪ ಭೇದ
ಬಲಿಯ ಮೆಟ್ಟಲೆಂದೆತ್ತಿದಂಥ ವಿಷ್ಣುವಿನ ಶ್ಯಾಮ ಪಾದ ||

೫೮

ಹಿಂದೆ ಸಂದ ರಾವಣನು ಬಿಡಿಸಿದನು ಇದರ ಸಂದುಜೋಡು
ದೇವತೆಯರ ಕನ್ನಡಿಯೆ ಆದ ಕೈಲಾಸವದುವೆ ನೋಡು ||
ಬಾನ ಮುಟ್ಟಿ ಕೆಲ ಶಿಖರವೆತ್ತಿ ಬೆಳಕೊತ್ತಿ ಒಟ್ಟಿದಂತೆ
ದಿನವು ಕೂಡಿ ಹಲರಾಶಿಯಾದ ಶಿವನಟ್ಟಹಾಸದಂತೆ ||

೫೯

ಎಣ್ಣೆಗಲಸು ಕಾಡಿಗೆಯ ಬಣ್ಣದವ ನೀನು ನಗದ ತುದಿಗೆ
ಕೆನೇರಿ ಹಲ್ಲಿಗೆರೆಯಂತೆ ಕೊರೆದ ಕೈಲಾಸ ಕೀಳು ಬದಿಗೆ ||
ಚಿತ್ತ-ಚಿತ್ರಪಟದಲ್ಲಿ ಬಳ್ಳಿ ನೀನಲ್ಲಿ ಹೇಗೆ ಕಾಂಬೆ
ಹೆಗಲಿನತ್ತ ಬಲಭದ್ರ ಹೊತ್ತ ಕಂಬಳಿಯೊ ಏನೊ ನಂಬೆ ||

೬೧

ತೋಳ ಹಾವ ಬಿಚ್ಚಿಟ್ಟು ಸತಿಗೆ ಕೈಗೊಟ್ಟು, ಕಾಲನಡಿಗೆ
ಲೀಲೆಯೆನಲು ಶಿವ, ಬೆಟ್ಟವೊತ್ತಬಹುದಾಗ ಗೌರಿಯಡಿಗೆ ||
ಮೇಘ, ಮೈಯನೊಟ್ಟಯಿಸಿಕೊಂಡು ಘನದಟ್ಟ ಒಟ್ಟಿಲಾಗಿ
ಶಿವನ ಸತಿಯು ಪದತಲಕೆ ಎರಗು ಮಣಿತಟಕೆ ಮೆಟ್ಟಿಲಾಗಿ ||

೬೨

ಬಳೆಯು ಚುಚ್ಚಿ, ಮಳೆ ಸುರಿಯು ಹೆಚ್ಚಿ, ಕೆಳಗಿಚ್ಛೆಯಂತೆ ಮೆಚ್ಚಿ
ದಿವ್ಯ ಯುವತಿಯರು ಜಳಕ ಮಾಡೆ ಮಾಡ್ಯಾರು ಮೋಡ ಕೆಚ್ಚಿ
ಮೋಕ್ಷ ಕೊಡರು ದುಡಿಸುವರು ದಣಿಯೆ, ಬಲು ಮೆತ್ತನವನ ಕಂಡು
ಆಟಕಾಗಿ ಗದ್ದರಿಸಿ ಒಮ್ಮೆ ನಡೆ ನಿನ್ನ ಬಿಡಿಸಿಕೊಂಡು ||

೬೩

ಚಿನ್ನ ಹೊನ್ನ ತಾವರೆಯು ಪಡೆವ ಮಾನಸದ ನೀರು ಕುಡಿಯೈ
ನೀರ ಕುಡಿಯುತಿರೆ ಬಟ್ಟೆಮುಸುಕು ಐರಾವತಕ್ಕೆ ಹಿಡಿಯೈ ||
ಕಲ್ಪವೃಕ್ಷಗಳ ಚಿಗುರು ಎಲೆಯ ತೂರಾಡು ತಾರು ಪಾರು
ಗೆಳೆಯನಲ್ಲಿ ಬಂದಿರುವೆ ಇಲ್ಲಿ ನಿನ್ನಾಟ ತಡೆವರಾರು ||

೬೪

ಪ್ರಿಯನ ತೊಡೆಗೆ ಹರಿದಿರುವ ಸೇಲೆಯೆನೆ ಗಂಗೆ ಅಲ್ಲಿ ಹರಿಯೆ
ಮೋಡಮುತ್ತು ಮುಡಿದಲ್ಲಿ ಮಾಡ ರಮಣಿಯರ ತೆರದಿ ಮೆರೆಯೆ ||
ಹೋಗು ನೋಡು ಒಂದೊಂದು ಸಲಕೆ ಈ ಅಲಕೆಯಂದ ಬೇರೆ
ಕಣ್ಣು ಮುಟ್ಟಿ ಇನ್ನೊಮ್ಮೆ ಕಾಣದೇ ಕಂಡೆ ಎನ್ನಲಾರೆ ||

# ಉತ್ತರಪಕ್ಷ

೧

ಮಿಂಚನುಳ್ಳ ಎಳೆವೆಂಡಿರುಳ್ಳ, ಮಳೆಬಿಲ್ಲ ಬಣ್ಣ ತಾಳಿ,
ಹಾಡಿಗಾಗಿ ಗುಡುಗುಡುಗಿದಂತೆ ಮದ್ದಳೆಯು ಸೊಲ್ಲ ಹೇಳಿ ||
ಮುಗಿಲ ಮುಟ್ಟ ಕರುಮಾಡ ಮುತ್ತು ರತುನಗಳ ನೀರು ತುಂಬಿ
ಇಹವು ಇಂಥ ಮಹಮನೆಗಳಲ್ಲಿ ಅವು ನಿನಗೆ ಸಾಟಿ ಎಂಬಿ ||

೨

ಮಾಟ ತಾವರೆಯು ಕೈಗೆ, ಕುರುಳಿನಲಿ ಬಾಲಕುಂದಮಾಲೆ,
ಲೋಧ್ರ ಪುಷ್ಪಗಳ ಸೂಸು ಹುಡಿಯು ಚೆಲುವಾದ ಮೊಗದ ಮೇಲೆ ||
ಚೆಂದ ಕುರುವಕವು ಹೆಳಲಿನಲ್ಲಿ, ಸಿರಿಸಲವು ಕಿವಿಯ ಬಳಿಗೆ
ಬೈತಲಲ್ಲಿ ಕಡವಾಲ ಹೂವು ಅಲ್ಲಿರುವ ಹೆಣ್ಣುಗಳಿಗೆ ||

೩

ಯಕ್ಷರಲ್ಲಿ, ಬಿಳಿ ಹರಳಿನಿಂದ ರಚಿಸಿರುವ ಸೌಧಗಳಲಿ,
ಚುಕ್ಕೆ ನೆರಳೆ ಅರಳಾಗಿ ಹಾಸೆ, ನಲುವೆಣ್ಣ ತೋಳುಗಳಲಿ ||
ನಿನ್ನ ಗುಡುಗಿನೊಡಗೂಡಿ ನುಡಿಸುವರು ವಾದ್ಯನಾದವಾಗಿ
ಬಯಕೆ–ತಾಳೆ–ಹಾಲನ್ನು ಕುಡಿವರೋ ಕಾಮಕೇಳಿಗಾಗಿ ||

೪

ಸಂವಸಂಗಳಲಿ ಗಂಗೆ ಮಿಂದ ತಂಗಾಳಿ ಹಾಯುವಲ್ಲಿ
ಅಲ್ಲೆ ತೀರವಲಿ ಬಿಸಿಲ ಮರೆಸಿ ಮಂದಾರ ಛಾಯೆ ಸುತ್ತ ||
ಹೊನ್ನ ಮಳಲು ಮಣಿ ತೂರಿ ಆಡುವರು ಹುಟ್ಟುಜವೆನಿಸುವರು
ಅಮರರಿಂದ ಪ್ರಾರ್ಥಿತರು ಆಗುವವು ಅಮರ ಕನ್ನಿಕೆಯರ ||

೫

ಉಟ್ಟ ರೇಸಿಮೆಯ ಸೀರೆ ಸೆಳೆಯೆ ಆತುರದ ಕರಗಳಿಂದಾ
ಮತ್ತೆ ಜರೆಯಲಿರೆ ಮೊದಲೆ ಸಡಲಿದಾ ಕಟಿಯ ನೀವಿಬಂಧ ||
ತೊಂಡೆ ತುಟಿಯ ಮರುಳೆಯರು ಪ್ರಿಯರೆದಿರು ನಾಚಿ ಬಳುಕಿ ಬಗ್ಗಿ
ರತ್ನದೀಪ ಸಂದಿಸಲು ಹವಣಿಪರು ಸುಳ್ಳೆ ಹುಡಿಯನುಗ್ಗಿ ||

೬

ಬಿಡದೆ ಬೀಸುವಾ ಗಾಳಿಯೊಡನೆ ಮನೆಯೇಳು ನೆಲೆಯನೇರಿ
ಅಲ್ಲಿ ಗೊಂಬೆಗಳನಂದಗೆಡಿಸಿ ಹನಿಯಿಂದ, ಹೆದರಿ ಜಾರಿ ||
ತಪ್ಪಿತಸ್ಥರೆನೆ ಕಂಡಿಯಿಂದ ಹೊರಬೀಳತಾವ ನೂಗಿ
ಮರಳಿ ಮೋಡ ತೊಟ್ಟಿಕ್ಕತಾವ ಹರಿ ಹಿಂಜು ಮಂಜು ಆಗಿ ||

೭

ಹೊದ್ದ ಮೋಡ ಹೊರಪಾಗಿ, ಬಿದ್ದ ಬೆಳದಿಂಗಳಿಂದ ಕುಸುರಿ
ಚಿಕ್ಕಿ ಚುಕ್ಕಿ ಸುರಿದಂತೆ ಕಿಟಿಕಿ–ತೆರೆ ಚಂದ್ರಕಾಂತ ಒಸರಿ
ಪ್ರಿಯರ ತಕ್ಕೆ ತೋಳೊಳಗೆ ಉಸುರು ಬಿಡುತಿರಲು ಹೆಂಗಳೊರಗಿ
ಕೂಟದಾಟದಾಸರವ ತಣಿಸುವವು ತಾವೆ ಮರುಗಿ ಕರಗಿ ||

೮

ತೀರದಿರುವ ತವನಿಧಿಯು ತುಂಬಿದಾ ಕಾಮಿ ಜನರು ಕೂಡಿ
ಅಮರ ಗಣಿಕೆಯರ ಸಂಗದಲ್ಲಿ ಸರಸಾಲಾಪ ಮಾಡಿ ||
ರಕ್ತಕಂಠಕಿನ್ನರರು ಧನದ ಯಶಗೀತ ಹಾಡೆ ಮೀರಿ
ಕಾಲ ಕಳೆಯುವರು ದಿನವು ಚೈತ್ರರಥವೆಂಬ ತೋಟ ಸೇರಿ ||

೯

ದುಡುಕು ನಡಿಗೆಯಲಿ ಅಲಕದಿಂದ ಮಂದಾರ ಹೂವು ಉದುರಿ
ಬೀದಿಯುದ್ದಕೂ ಚಿಗುರುತಿಗುರು, ಕಿವಿಕನಕ-ಕಮಲ ಬಿದಿರಿ ||
ಸೂಲು ಹರಿದು ಎದೆಯುಜ್ಜಿ ಜರಿದು ಸರ ಮುತ್ತು ತೊಳಗತಾವ
ಮತ್ತ-ಕಾಮಿಗಳ ಇರುಳ ಹಾದಿಯನು ಬೆಳಗು ಬೆಳಗತಾವ ||

೧೦

ಧನದ ಪತಿಯ ಜೊತೆಯಿವನು ಶಿವನು ಇಲ್ಲಿರುವನೆಂದು ಬಗೆದು
ಕಬ್ಬು-ತುಂಬಿ-ಹೂವುಗಳ ಬಿಲ್ಲು-ಹೆದೆ-ಬಾಣ ದೂರ ಒಗೆದು ||
ಕಾಮಿಗಳಿಗೆ ಗುರಿಯಿಟ್ಟನಂಗನಿಹನಿಲ್ಲಿ ಕುಡಿಯ ಕಣ್ಗೆ
ಇಲ್ಲದಿದ್ದರೀ ಹುಬ್ಬು-ಬಿಲ್ಲಿನಲಿ ಮುರುಕವೇಕೊ ಹೆಣ್ಗೆ ||

೧೧

ರಂಗುರಂಗಿನಾ ಸೀರೆ, ಕಣ್ಣ ತಿರುಪಾಟವಾಡೆ ಮಧುವು,
ಹೂವು ಹೂವು, ಹಲಚಿಗುರು, ಒಡವೆ ತೊಡವಾಗಬಲ್ಲ ಒದವು; ||
ಅಡಿಯ ಕಡೆಯ ಕಾರಣೆಯ ಅರಗಿನಾ ಬಣ್ಣ, ಒಂದೆ ಎರಡೇ
ಹೆಣ್ಣಿನೆಲ್ಲ ಸಿಂಗರವನೀವುದಾ ಕಲ್ಪವೃಕ್ಷ ಬರಡೇ ? ||

೧೨

ಅಲ್ಲಿ ನಮ್ಮ ಮನೆ ಯಕ್ಷಪತಿಯ ಮನೆಯುತ್ತರಕ್ಕೆ ಇಹುದು
ಇಂದ್ರಚಾಪ ತೋರಣದಿ ಮೆರೆದು ದೂರಿಂದ ಕಾಣಬಹುದು ||
ಹತ್ತಿರಕ್ಕೆ ನನ್ನಾಕೆ ನೀರಸುಣಿಸಿರುವ ಕಂದನಾಗಿ
ಕೈ ಯತ್ತರಾದ ಮಂದಾರವೊಂದು ಇದೆ ಗೊಂಚಿಲಾಗಿ ಬಾಗಿ ||

೧೩

ಪಚ್ಚೆಕಲ್ಲ ಮೆಟ್ಟಿಲುಗಳುಳ್ಳ ಹೊಕ್ಕರಣಿ ತುಂಬ ಅಗಲಾ
ಹೊನ್ನ ಕಮಲಗಳ ಕಾವು ಹೋಲುತಿದೆ ಹಸಿರು ನೀಲಿ ಮುಗಿಲಾ ||
ಪತ್ತಿರಕ್ಕೆ ಮಾನಸವು ಇರಲಿ, ನೀ ಬರಲಿ ಮೇಲೆ ಠಾವು
ಬಿಡದೆ ಹಂಸ ನಮ್ಮಲ್ಲೆ ಆಡುವವು ತೃಪ್ತವಾಗಿ ತಾವು ||

೧೪

ಮಾಟ-ಗುಡ್ಡ ಬಿಳಿನೀಲಿ ಮಣಿಯ ಕೋಡಾಗಿ ಅದರ ಬಳಿಗೆ
ಇಹುದು ಬೇಲಿ ಹೊಂಬಾಳೆಯಾಗಿ ಹವಣಾಗಿ ಸುತ್ತುವಳಿಗೆ
ಅದುವು ಮುದ್ದು ನನ್ನಾಕೆಗಣ್ಣ. ಅದರಂತೆ ನಿನ್ನ ಮೋಡಿ ||
ಅವರ ನೆನಪೆ ನನಗಾಗುತಿಹುದು ಮಿಂಚುಳ್ಳ ನಿನ್ನ ನೋಡಿ ||

೧೫

ಸುತ್ತುಮುತ್ತು ಮದರಂಗಿ, ನಡುವೆ ಮಾಧವಿಯ ಬಳ್ಳಿ ಮಾಡ
ಅತ್ತ ಚೆಂದ ಕೇಸರವು, ಇತ್ತಲಿದೆ ಕೆಂಪಶೋಕ ನೋಡಾ ||
ಒಂದು ಬೇಡುವದು ನಿನ್ನ ಸಖಿಯ ಎಡಗಾಲು ಸೋಂಕಲೆಂದು
ಮುಕ್ಕು ಮಧುವನುಗುಳಿದರೆ ಸಾಕು ಬಯಸುವದು ಮತ್ತಿನೊಂದು ||

೧೬

ಮರದ ನಡುವೆ ಬಿಳಿ ಹಾಸುಗಲ್ಲು ಬಂಗಾರ ಕೋಲು ನಡುಕೆ
ಎಳೆ ಬಿದಿರ ಬಣ್ಣ ಬೆಲೆ ಹರಳಿನಿಂದ ನೆಲೆಗಟ್ಟು ಅದರ ಬುಡಕೆ ||
ಆ ಕೋಲಿನಲ್ಲಿ ಕುಣಿಸುವಳು ನವಿಲ ನನ್ನಾಕೆ ಸಂಜೆಯಲ್ಲಿ
ಕೈ ತಟ್ಟಿ ಮಾಟ ಬಳೆ ತಾಕಲಾಟ ಥಕಥೈಯ ಥಾಟಿನಲ್ಲಿ ||

೧೭

ಇಂತು ನಮ್ಮ ಮನೆ ಕಂಡುಕೊಳ್ಳು ನೀ ಬೇರೆ ಗುರುತೆ ಇದಕೆ
ಶಂಖ ಪದ್ಮಗಳು ದ್ವಾರಪಾಲರೊಲು ಇದಕೆ ಎಡಕೆ ಬಲಕೆ ||
ಅಲ್ಲಿ ಬಣ್ಣಗುಂದಿರುವ ಮನೆಯು ತೋರುವದು ನನ್ನ ಒಲವಾ
ಸೂರ್ಯನಿಲ್ಲದಿರೆ ಕಮಲವೆಂತು ತೋರೀತು ತನ್ನ ಚಲುವಾ ||

೧೮

ಆನೆ ಮರಿಯುವೊಲು ಮಾಟವಾಗಿ ಒಳಸೇರು ಅಲ್ಲಿ ಹೋಗಿ
ಮೊದಲು ಹೇಳಿದಾ ಕೃತಕಶೈಲವನ್ನೇರು ಅರಸನಾಗಿ ||
ನಿನ್ನ ಮಿಂಚುಗಣ್ಣನ್ನು ಮಿಟುಕಿಸುತ ಮಿಂಚುಹುಳವ ಮಾಡು
ಆಗ ನಮ್ಮ ಮನೆಯಲ್ಲಿ ನಿನ್ನ ನೋಟವನು ಚೆಲ್ಲಿ ನೋಡು ||

೧೯

ಬಳ್ಳಿ ಮೈಯು, ನನೆಹಲ್ಲು, ಕೆಂಪು ತುಟಿ ಹಣ್ಣು ತೊಂಡೆಯಂತೆ
ಸಣ್ಣ ನಡುವು, ಚೆಲು ಹುಲ್ಲೆಗಣ್ಣು, ಕುಳಿ ನಾಭಿ ಸುಳಿಗಳಂತೆ ||
ತುಂಬು ಎದೆಗೆ ನಸು ಬಾಗಿ, ಹರಹು ಹಿಮ್ಮೈಗೆ ಮಂದವಾಗಿ
ಎಲ್ಲ ಹೆಣ್ಣಿನೊಳೆ ಬ್ರಹ್ಮಕೃತಿಗೆ ಹೊಸ ಹೊಚ್ಚ ಚೊಚ್ಚಿಲಾಗಿ ||

೨೦

ಹೆಚ್ಚು ಮಾತು ಇರದಚ್ಚ ಅವಳೆ ತಿಳಿ ನನ್ನ ಪ್ರಾಣಪೆಂದು
ನನ್ನಗಲಿ ಇಹಳೆಂತೊ ಇರುಪವೊಲು ಚಕ್ರವಾಕಿಯೊಂದು ||
ಕಾಲ ಕಳೆದ ಹಾಗೆಲ್ಲ ಕಾಣುವಾತುರವು ಆಳವಾಗಿ
ಇಹಳು ಬೇರೆ ಪದ್ಮಿನಿಯೊ ಏನೊ ಚಳಿಕುಳಿರ ಸೋಂಕು ತಾಗಿ ||

೨೧

ಅತ್ತು ಅತ್ತು ಮತ್ತತ್ತು ಕೆದರಿಕೊಂಡಿಹುದು ಕಣ್ಣ ಪೊಗರು
ಬಿಚ್ಚನುಸಿರನುಂಡುಂಡು ಸೊಪ್ಪೆಯಾಗಿಹುದು ತುಟಿಯ ಚಿಗುರು ||
ಗಲ್ಲದಲ್ಲಿ ಕೈ, ಓರೆ ಮೋರೆ, ನಿಡಿಗೂದಲುದ್ದ ಚಿಂತೆ
ಮೋಡ ಮುಸುಕಲಿರೆ ಮಂಕುಗವಿದ ಆ ದೀನ ಚಂದ್ರನಂತೆ ||

೨೨

ಅವಳು ಬೀಳುವಳೊ ನಿನ್ನ ಕಣ್ಗೆ ಆಚಾರದಲ್ಲಿ ತೊಡಗಿ
ಸೊರಗಿ ಕಡ್ಡಿಯಾದವನ ನನ್ನ ಚಿತ್ರವನೆ ಬರೆವ ಹುಡುಗಿ ||
ಇಲ್ಲ ಕೇಳುತಿರಬಹುದು ಸಾಕುಸಾರಿಕೆಯ "ಹೇಳೆ ಜೇನೇ
ಅವರ ಮುದ್ದು ಸೀ, ನಿಮ್ಮ ಒಡೆಯರನು ಒಮ್ಮೆ ನೆನೆವೆಯೇನೇ ?" ||

೨೩

ನನ್ನ ಕುರಿತು ಪದವೊಂದು ಕಟ್ಟಿ ಅದ ಹೇಳಲೆಣಿಸಿ ಜಾಣೆ
ತಾನೆ ರಚಿಸಿದಾ ಏರು ಇಳುವುಗಳ ಕ್ರಮವ ಮರೆತು ತಾನೇ ||
ತೊಟ್ಟುಸುರಿವ ಕಂಬನಿಯ ತಂತಿಯನೆ ಮಿಡಿಯುತಿಹಳೊ ದೀನೆ
ಮಾಸುಬಟ್ಟೆ ತೊಟ್ಟವಳ ತೊಡೆಯೊಳಿರಬಹುದು ಬಿದ್ದ ವೀಣೆ ||

೨೪

ಕಳೆದವೆಷ್ಟು ಇನ್ನುಳಿದವೆಷ್ಟು ದಿನವೆಂದು ಲೆಕ್ಕವಿಟ್ಟು
ಹೊಸ್ತಿಲಕ್ಕೆ ಹೂವಿಟ್ಟು ನೋಡುವಳೊ ನಾನು ಹೋದ ತೊಟ್ಟು ||
ಇಲ್ಲ ಎದೆಯ ಮುಟ್ಟೆಳಿದ ಮೊದಲ ಸಂಗಗಳ ಸವಿವಳೇನೋ
ನಲ್ಲರಗಲೆ ನಲ್ಲೆಯರಿಗೆಲ್ಲ ಇವು ಆಟ ಇಷ್ಟೆ ತಾನೋ ? ||

೨೫

೨೫

ಹಗಲು ಹೊತ್ತು ಹೋದೀತು ಕೆಲಸದಲಿ ಹೇಗೊ, ಬಲ್ಲೆ ನಾನು
ಇರುಳು ಅವಳ ಗತಿಯೇನೊ? ಅಳುವದೋ? ನೆನೆಯಲೊಲ್ಲೆ ನಾನು ||
ನನ್ನ ಸುದ್ದಿ ಹೇಳಿದರೆ ಸಾಕು, ಸೀನಿಣಕಿ ನೋಡು, ಪಾಪಾ
ಸಾಧ್ವಿ ನೆಲದೊಳೇ ನಿದ್ದೆಯಿಲ್ಲದೇ ಹೊರಳುತಿರುವ ತಾಪಾ ||

೨೬

ಹೊರಳು ಮಗ್ಗುಲಗಲಿಕೆಯ ಹಾಸಿನಲಿ ಸೋತ ಮೈಯ್ಯ ಚೆಲ್ಲಿ
ಓರೆಯಾಗಿ ಬಿದ್ದಿರುವ ಚಂದ್ರಕಳೆಯಂತೆ ಪಡುವಲಲ್ಲಿ, ||
ಯಾವ ಇರುಳು ನನ್ನೊಡನೆ ಬೇಟದಲಿ ಕ್ಷಣಿಕವಾಗಿ ಹೋಯ್ತು
ಅವಳಿಗದುವೆ ಬಿಸಿಯುಸಿರಿಯತ್ತು ಮುಗಿದೀತೆ ಎನುವೊಲಾಯ್ತು ||

೨೭

ಇಂಪುಗರೆವ ಇಂದುವಿನ ಕಿರಣ ಜಾಳಾಂದ್ರದಿಂದ ಸುರಿಯೆ
ಆಸೆಗೂಡಿ ಹರಿದೋಡಿ, ನೋಡಿ, ಒದೆದಂತೆ ಹಿಂದೆ ಸರಿಯೆ ||
ಮುಚ್ಚಲಿಲ್ಲ, ಸರಿ, ಬಿಚ್ಚಲಿಲ್ಲ ಎನುವಂಥ ಕಮಲದಂತೆ
ಎವೆಯು ತೊಯ್ದು ಕಣ್ತೆರೆಯಲೊಲ್ಲದೇ ನಿಲ್ವಳೇನೊ ಭ್ರಾಂತೆ ||

೨೮

ತುಟಿಯ ಚಿಗುರನೊಣಗಿಸುವ ಉಸಿರಿನಲೆ ಹಾರಿಸುವಳು ಎಲ್ಲಾ
ಎಣ್ಣೆ ಕಾಣದುರುಟಾದ ಮುಂಗುರುಳು ಒಲಿಯೆ ಗಲ್ಲಗಲ್ಲಾ ||
ಕಣ್ಣ ತುಂಬ ಕಂಬನಿಯೆ ಆಗಿ, ಕುದಿಯುವಳೊ ತಾನು ಬೆಂದು
ನಿದ್ದೆ ಬಂದು, ಕನಸಾರೆ ಕಂಡು, ಸೇರೇನೆ ನನ್ನನೆಂದು ||

೨೯

ಆಗಲಿದಂದೆ ಕಟ್ಟಿತ್ತು ಮುಡಿಯು, ಬಿಚ್ಚಿತ್ತು ಹೆಳಲಮಾಲೆ
ಕೂಡಿದಂದು ಹಾಕೇನು ನಾನು, ಮುಡಿಸೇನು ಎಂದು ಬಾಲೆ ||
ಕಾದು ಇಹಳು, ಜಡೆಗಟ್ಟಿ ಗಲ್ಲಗಳನುಜ್ಜಿ ಅವುಗಳೊತ್ತೆ
ಸಮರುತಿಹಳು ಬೆಳೆದುಗುರಿನಿಂದೆ ಕೂದಲವ ಮತ್ತೆ ಮತ್ತೆ ||

೩೦

ತೊಡಿಗೆ ತೊರೆದು ಹೆಣವಾಗಿ ಇಹಳೊ ನಾ ಹೇಳಲೇಕೆ ಬಣ್ಣ
ಹಾಸಿನಲ್ಲು ಮೈ ಹೊರಳುವಾಗಲೂ ನರಳುತಿಹಳೊ ಸಣ್ಣ ||
ನೀನು ಕೂಡ ಆದ ಕಂಡ ಕೂಡಲೇ ಹನಿಸಿ ಬಿಡುವಿ ಕಣ್ಣ
ಕರುಳುಯಿದ್ದ ಎದೆಗಾರರಾರಿದಕೆ ಕರಗದಿರುವರಣ್ಣ ? ||

೩೧

ನನ್ನೊಳೊಲಿದ ಆ ನಿನ್ನ ಅತ್ತಿಗೆಯ ಚಿತ್ತವಿಷ್ಟು ನೊಂದು
ತರ್ಕಿಸುವೆನು ಮೊದಲಗಲಿ ನನ್ನ ಇರಬಹುದು ಹೀಗೆ ಎಂದು ||
‘ ನಾನೆ ಕಾಮ, ಲೋಕೈಕಪತಿಯು ’ ಎನುವಂತೆ ಸತಿಯ ಲೀಲೆ
ಬಣ್ಣಿಸಿದೆನು ವಾಚಾಳಿಯಂತೆಯೋ ? ಹೇಳು ಕಂಡ ಮೇಲೆ ||

೩೨

ಕುರುಳು ಜೋತು, ಕುಡಿಗಣ್ಣು ಮುಚ್ಚಿ, ಮಂಕಾಗಿ ಕಾಡಿಗಿರದೇ
ಮಧುವ ಕುಡಿಯದೊಣಕಾದ ನಯನ ಮುರಿ ಹುಬ್ಬಿನಾಟ ಮರೆದೇ ||
ಹಾರಿ ತನ್ನ ಎಡಗಣ್ಣು, ಬೆಚ್ಚಿ ಬರಿ ಬಾನ ತುಂಬೆ ನೀನೋ
ಸುಳಿಯೆ ಮೀನ ಚಲಕಮಲದಂತೆ ಆ ಕಣ್ಣು ಕಾಂಬವೇನೊ ||

೩೩

ಕೆಲಕೆ ಎಡಕೆ ಇನ್ನೂನು ಬಿದ್ದಿಹುದು—ಏನೊ ಕೆಟ್ಟ ಗಳಿಗೆ!
ನಡುವುಸುತ್ತಿನಾ ಮುತ್ತು ಮಾಲೆ ಸಿಕ್ಕೆನ್ನ ಉಗುರುಗಳಿಗೆ ||
ಕಂಡು ಅದನು ಹೊಂಬಾಳೆದಿಂಡುದೊಡೆ ಅದಿರೆ, ನಾನು ಬಳಿಗೆ
ಇಲ್ಲ. ಗಳಿಗೆ ಕಳೆಯುವಳು ನನೆಸಿ ಆ ಸೀರೆ ನಿರಿಗೆಗಳಿಗೆ ||

೩೪

ನೀನು ಹೋದ ಆ ಹೊತ್ತೆ ನಿದ್ದೆ ಚಿತ್ತೈಸೆ ಅವಳ ನೋಡಾ
ಮೇಘರಾಜ, ದಯೆ ಮಾಡಿ ತಡೆಯೊ ಹುಸಿ ಗುಡುಗು ಹಾಕಬೇಡಾ ||
ಹೇಗೊ ಕನಸಿನಲಿ ಸೇರಿ ನನ್ನ ಮುಗಿಬಿದ್ದು ಕೊರಳ, ಹುಚ್ಚಿ
ಎದ್ದಾಳೊ ಬಾಲೆ ಬಿದ್ದಾಳೊ ಬೆದರಿ ಕೈ ಮಲಕು ಬಿಚ್ಚಿ ಬೆಚ್ಚಿ ||

೩೫

ತಂಗಾಳಿ ಬೀಸಿ ತುಂತುರಿಸಿ ನೀನು ಎಚ್ಚರಿಸಿದಾಗ ಬಾಲೆ
ಮಳೆಯಾಗಿ ಮಿಂದ ಹೊಸ ಮೊಲ್ಲೆ ಮೂಸಿ ಮನ ವಾಸಿಯಾದ ಮೇಲೆ ||
ಮಿಂಚಿನವನೆ ಹಿಗ್ಗಣ್ಣಿನವಳಿಗಾ ಬೆಳಕುಕಂಡಿಯಿಂದಾ
ಮಾತನಾಡು ಗಂಭೀರನಾಗಿ ನಸು ಗುಡುಗು ಬೆಡಗಿನಿಂದಾ ||

೩೬

ಕೇಳು ಮಂಗಲೇ, ಬಂದೆ ನಾಥ–ಸ್ನೇಹಿತನು ಜಲದ ನಾನು
ಅವನ ಕುಶಲವನು ಎದೆಯೊಳಿರಿಸಿ ಕೊಂಡಿಹೆನು, ಕೆಲಸವೇನು ? ||
ದೂರ ಹೋದ ದಾರಿಗರ ತರುವೆನವರವರ ಮಂದಿರಕ್ಕೆ
ತಮ್ಮ ನಲ್ಲೆಯರ ಹೆಳಲ ಬಾಚಿ, ಹಳೆ ಹಿಣಿಲ ಬಿಡಿಸಲಿಕ್ಕೆ ||

೩೭

ಹೀಗೆ ಹೇಳುತಲೆ, ಸೀತೆ ಹನುಮನನು ಕಾಣುವಂತೆ ಕಂಡು
ನಿನ್ನ ಮಾತು ಎದೆಯುಬ್ಬಿ ಕೇಳುವಳೊ, ಅಪ್ಪ ಇದಿರುಗೊಂಡು ||
ಪ್ರಿಯರ ಕುಶಲ ಸ್ನೇಹಿತರೆ ಹೇಳಿದರೆ ಕೇಳಬೇಕೆ ನ್ಯೂನ ?
ಕಾಂತೆಯರಿಗೆ ಏಕಾಂತದಂತೆ ಕೂಟಕ್ಕು ಕಿಂಚಿದೂನ! ||

೩೮

ಹೇಳು ನಿನ್ನ ಧರ್ಮಕ್ಕೆ, ನನ್ನ ಭಾಗ್ಯಕ್ಕೆ, ರಾಜ ಬಾಳು
ರಾಮಗಿರಿಗಳಲ್ಲಿರುವ ನಿನ್ನ ಸಂಗಾತಿಯೆಂದು ಹೇಳು ||
ಒಳ್ಳಿತೇನೆ ಅಬಲೇ ಎಂದು ನನಗಾಗಿ ಕೇಳು ಕೂರ್ತು
ಕಷ್ಟ ಸುಲಭವಿರುವಂಥ ಪ್ರಾಣಿಗಳಿಗಿದೇ ಮೊದಲ ಮಾತು ||

೩೯

ನಿನ್ನ ಹಾಗೆ ಮೈ ಸೊರಗಿ, ಕಾದು, ಕಣ್ಸುರಿಸಿ, ಕಂಠ ಬಿಗಿದು
ಉಸಿರಿಗಿಷ್ಟು ನಿಟ್ಟುಸುರು, ಯೋಗದಲಿ ದೇಶದೆಲ್ಲೆ ಜಿಗಿದು ||
ವೈರಿ ವಿಧಿಯು ಕಟ್ಟಿರಲು ದಾರಿ, ತೆರೆದಿದ್ದೆ ಹಾದಿ ಜಾಣೆ
ಭಾವದಿಂದ ಒಡಗೂಡ ಬಯಸಿದೆನೆ ನನ್ನ ಭಾವರಾಣಿ ||

೪೦

ಏನೊ ಹೇಳುವಾ ನೆವನ ಮಾಡಿ ತುಟಿ ತಂದು ಕಿವಿಯ ಬಳಿಗೆ
ನಿನ್ನ ಸಖಿಯರಿದಿರಲ್ಲೆ ಒರಗಿರುತ್ತಿದ್ದೆ ಗಳಿಗೆ ಗಳಿಗೆ ||
ಮಾತಿನಾಚೆ, ಕಣ್ಣಾಚೆ ಸನ್ನವಳು, ಇಂದು ಬವಣೆಗೊಂಡೆ
ಹೇಳು ನಾನು ನಿನ್ನಿದಿರು ಬಯಲಿನಲಿ ಹೀಗೆ ಕೂಗಿಕೊಂಡೆ ||

೪೧

ಬಳ್ಳಿಯಲ್ಲಿ ಆ ಬಳುಕು ಮೈಯ್ಯು, ಹುಲ್ಲೆಯಲಿ ಬೆದರುಗಣ್ಣು
ಮುಖದ ಛಾಯೆ ಚಂದ್ರನಲಿ, ಗರಿಗಳಲಿ ಹೆಳಲ ಭಾರವನ್ನು ||
ನದಿಯ ಹರಿತದಲಿ ಹುಬ್ಬು ಮುರಿತವನು ಕಾಣಬೇಕು ಎಂದೆ
ಇಷ್ಟು ಕೂಡ ಸಾದೃಶ್ಯ ಕಾಣದೆ, ಚಂಡಿ, ನೊಂದೆ ಬೆಂದೆ ||

೪೨

ಅರೆಗಳಲ್ಲಿ ಕೆಂಗಾವಿಯಿಂದ ಹುಸಿ ಮುನಿಸಿನವಳ ಬರೆದು
ನಿನ್ನ ಮೆಲ್ಲಡಿಗೆ ಕೆಡಹಿಕೊಳಲು ಬರುತಿರಲು ಮುಂದುವರಿದು ||
ಕಣ್ಣು ತುಂಬಿ ಕಂಗೆಡಿಸಿ ಕಂಬನಿಯು ಹಳ್ಳ ಹರಿದಿತಲ್ಲಽ
ಚಿತ್ರದಲ್ಲಿ ಕೂಡುವದು ಕೂಡ ಆ ಇದಿಗೆ ಸೇರಲಿಲ್ಲಽ ||

೪೩

ಬಯಲಿನಲ್ಲಿ ತೋಳ್ತೆರೆದು ನಿನ್ನ ಬಿಗಿತಾಗಿ ಅಪ್ಪಿಕೊಂಡು
ಸಿಕ್ಕೆ ನೀನು ಹೇಗಾರೆ ಎಂದೆ, ನಾ ಕನಸುಗಳಲಿ ಕಂಡು ||
ಇದನು ನೋಡಿ ಮರುಮರುಗದಿರುವ ವನದೇವತೆಯರೆ ಅಲ್ಲಿ?
ಮುತ್ತಿನಂಥ ಕಂಬನಿಯ ಸುರಿಸಿದರು ಚಿಗುರು ಚಿಗುರಿನಲ್ಲಿ ||

೪೪

ಸಸಿಯು ಮುರಿದು, ಚಿಗುರೊಡೆದು, ಬಿರಿದಿರುವ ದೇವದಾರು ಮರವು
ಅಂಟು ಸುರಿದ ನರುಗಂಪ ಕುಡಿದ ಕುಳಿಗಾಳಿಗೇನು ಭರವು! ||
ಸುಗುಣಿ ನಿನ್ನ ಮೈ ಮುಟ್ಟಿ ಬಂದಿತೋ ಏನೊ ಎಂದು ನಾನು
ಆ ಹಿಮಾದ್ರಿವಾತವನೆ ಇಲ್ಲಿ ಉಬ್ಬುಬ್ಬಿ ತಬ್ಬುತಿಹೆನು ||

೪೫

ಮೂರು ಜಾವ ಉದ್ದಿದ್ದ ಇರುಳು ಕ್ಷಣದಂತೆ ಕಳೆಯಬಹುದೇ
ಇಡಿಯ ಹಗಲು ಯಾವಾಗಲೂನು ದಿಗಿಲಾಗದಂತೆ ಇಹುದೇ ||
ಇಂತು ಚಿತ್ತ ಕೈಗೂಡದಾದ ಬಯಲಾಸೆಯಿಂದ ನೊಂದು
ನಿನ್ನ ವಿರಹ ವ್ಯಥೆಯಿಂದ ಬೆಂದು, ಬದುಕಿಹೆನು ಹೇಗೊ ಇಂದು ||

೪೬

ಆದರೂನು ಹಿಡಿದಿರುವೆ ಜೀವ, ಏನೇನೊ ಲೆಕ್ಕ ಹಾಕಿ
ಸುಭಗೆ ಅಂಜಿ ನೀ ಸಾಯಬೇಡ, ಕಳೆ ಕಾಲ ಹೇಗೊ ನೂಕಿ ||
ಯಾರು ಬರಿಯ ಸುಖ, ಬರಿಯ ದುಃಖ ಪಟ್ಟವರು ಲೋಕದಲ್ಲಿ
ದೆಸೆಯು ಕೆಳಗೆ ಮೇಲಾಗಿ ತಿರುಗುವದು ಏಕಚಕ್ರದಲ್ಲಿ ||

೪೭

ಹಾವುಹಾಸಿಗೆಯ ಹರಿಯು ತೊರೆವ ದಿನ ಶಾಪ ಮುಗಿಯಲಹುದು
ನಾಲ್ಕು ತಿಂಗಳನು ಕಣ್ಣು ಮುಚ್ಚಿ ನೀನಿನ್ನು ಕಳೆಯಬಹುದು ||
ಬಳಿಕ ಬರುವೆ, ಇನ್ನುಳಿದ ಬಯಕೆಗಳು ಇರಲಿ ಏಕೆ ಚಿಂತೆ ?
ಬೆಳೆವ ತಿಂಗಳಲಿ ಇರುಳು ಇರುಳುಗಳ ಅದಕೆ ಕಳೆವೆವೆಂತೆ ||

೪೮

ಒಮ್ಮೆ ನಿನಗೆ ದಿನನಂತೆ ಕೊರಳ ತಳಕಿರಿಸಿ ನಿದ್ದೆಯಂತೆ
ತೋಳದಿಂಬಿನಲಿ ಹೊರಳಿ ನೀನಳುತ ಏಕೊ ಎದ್ದೆಯಂತೆ ||
ಕೇಳಕೇಳುತಿರೆ ಏನು ಎಂದು ಒಳನಕ್ಕು ಅಂದೆಯಂತೆ :-
'ಕಂಡೆ ಕನಸಿನಲಿ, ಕಳ್ಳ ನೀನು ಯಾವಳನೊ ಕೂಡಿದಂತೆ' ||

೪೯

ಕುಶಲನಿರುವೆ ನಾನಿಲ್ಲಿ ನಿನ್ನನೇ ನೆನೆದು ಧೈರ್ಯತಾಳಿ
ನೀನು ಕೂಡ ಎದೆಗೆಡಿಸಿಕೊಳ್ಳದಿರು ಏನೊ ಸುದ್ದಿ ಕೇಳಿ ||
ಅಗಲಿದಾಗ ತಿನ್ನುವದು ಸ್ನೇಹವೆನ್ನುವರು ಜೀವವನ್ನು
ಕೂಡಿದೊಡನೆ ಅದೆ ಸೂರೆ ಮಾಡುವದು ಪ್ರೇಮಭಾವವನ್ನು ||

೫೦

ಮೊದಲ ವಿರಹದಲಿ ಬೆಂದ ಸಖಿಗೆ ನೀ ಹೀಗೆ ಧೈರ್ಯಹೇಳಿ
ಶಿವನ ಬಸವನಗೆಏರುವ ನಗದ ತುದಿಯಿಂದ ಕಾಲ ಕೀಳಿ ||
ಮರಳಿ ಬಂದು ಅವಳೊಸಗೆ ತಂದು ನನಗೊಂದು ಬಾಳ ನೀಡು
ಕಳಚಿ ಬೀಳಲಿಹ ಕುಂದಕುಸುಮದೊಲು ಇಹುದು ನನ್ನ ಪಾಡು ||

೫೧

ಒಪ್ಪಿಕೊಂಡೆಯಾ, ಅಪ್ಪ, ಹೇಳು ಈ ಬಂಧುಕೃತ್ಯವನ್ನು
ಇಲ್ಲವೆಂದು ನಾ ತಿಳಿಯೆ ನಿನ್ನ ಗಂಭೀರ ಮೌನವನ್ನು ||
ನೀರ ನೀಡಿ ಚಾದಗೆಗೆ, ಸುಮ್ಮನಿಹೆ. ಬೇರೆ ಸಾಕ್ಷ್ಯ ಬೇಕೆ
ತಮ್ಮ ಇಷ್ಟದವರಿಷ್ಟ ಮಾಡುವವ ಬಾಯಲಾಡಲೇಕೆ ? ||

೫೨

ಸಿಕ್ಕ ಹಾಗೆ ನಾ ಬೇಡಿಕೊಂಡೆ, ಮಾಡಿಷ್ಟು ನನ್ನದನ್ನು
ಎನ್ನ ಗೆಳೆಯನಿವ, ಎನ್ನ ಅಗಲಿದವ, ಅಯ್ಯೊ ಪಾಪ, ಎನ್ನು ||
ತಿಳಿದ ನಾಡು ತಿರುಗಾಡು ಮೇಘವೇ ಮಾಟ ಆಟವಾಡಿ;
ಬೇಡಿಕೊಂಬೆ ನಾ ಇರಲಿ ಎಂದಿಗೂ ನೋಡ ಮಿಂಚುಗೂಡಿ ||

## ಕೃತಜ್ಞತೆ

ನನ್ನ ಮನದ ಕಜ್ಜಳವ ಕಳೆದು ಹೊಸ ಬೆಳಕು ಹೊತ್ತಿ ಕುಡಿಗೆ
ನಾನು ಹಿಗ್ಗಿದೆನು ನಿನ್ನ ಕೃತಿಯನಿಟ್ಟಂತೆ ನನ್ನ ಮುಡಿಗೆ ॥
“ ಹೋಗು ಸುಕವಿ-ರಸ-ದಾಸಿಯಾಗಿ ದುಡಿ ” ಎಂದೆ ನನ್ನ ನುಡಿಗೆ
ಮಾತಿನಲ್ಲೆ ಮೂಲೋಕ ಸೃಜಿಸುವಾ ನಿನ್ನ ಪ್ರತಿಭೆಯಡಿಗೆ ॥

ಹಿಂದಾಗಲಿಲ್ಲ, ಮುಂದಾಗಲಾರ, ಕವಿ ಕಾಳಿದಾಸ ನೀನು
ಶೃಂಗಾರದಿಂದೆ ನವಭಕ್ತಿರಸವ ಹೊಮ್ಮಿಸುವ ದಿವ್ಯಭಾನು ॥
ರಸವತಿಯು ನಿನ್ನ ಸರಸತಿಯು, ಸವಿಗೆ ತುಟಿಮುದ್ದು ಹಾಲು ಜೇನು
ಕನ್ನಡದೊಳಿಂದು ಕನ್ನಡಿಸಿದಂತೆ ಮೂಡಿರುವಳಿಲ್ಲಿ ತಾನು ॥

# ಒಪ್ಪೋಲೆ

## ಪ್ರಸ್ತಾವನೆ

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| ೨ | ೧೩ | ತಿಪಮೊಗ್ಗೆ | ಶಿವಮೊಗ್ಗೆ |
| ೩ | ೧೫ | ವಿರಹಿರಕಸಿನ | ವಿರಹಿರಸಿಕನ |
| ,, | ೧೯ | ಜೇಶಿವಣರ್ನೆ | ದೇಶವರ್ಣನೆ |

## ಪೀಠಿಕೆ

| | | | |
|---|---|---|---|
| ೨ | ೫ | ಆ ಬಹ್ಮಕದುವೆ | ಆ ಬ್ರಹ್ಮಕದುವೆ |
| ೬ | ೩ | ಲಘಪದ | ಲಘುಪದ |

## ಪೂರ್ವಮೇಘ

| ನುಡಿ | ಚರಣ | ತಪ್ಪು | ಒಪ್ಪು |
|---|---|---|---|
| ೩೩ | ೨ | ಶ್ರಿ | ಶ್ರೀ |
| ೪೮ | ೧ | ಬಹ್ಮ | ಬ್ರಹ್ಮ |

## ಉತ್ತರಮೇಘ

| | | | |
|---|---|---|---|
| ೨ | ೧ | ಬಾಲಕುಂದೂವಲಿ | ಬಾಲಕುಂದ ಮಾಲಿ |
| ೪೮ | ೩ | ಒಳನಕ್ಕಾ | ಒಳನಕ್ಕು |

೧೬ ನೇ ಪುಟದಲ್ಲಿ ೬೧, ೬೨, ೬೩, ೬೪ ಎಂದು ಇರುವ ನುಡಿಯ ಕ್ರಮಾಂಕವನ್ನು ೬೦. ೬೧, ೬೨, ೬೩ ಎಂದೋದಿಕೊಳ್ಳಬೇಕು.

“ ನಮೂನ ”ದ ಹಿಂದಿನ ಪುಟದಲ್ಲಿ ೨ ನೇ ಸಾಲಿನಲ್ಲಿರುವ ವನಸೋ ಇದ್ದುದನ್ನು ಮನಸೋ ಎಂದೋದಿಕೊಳ್ಳಬೇಕು.

ಸಾಧನ
ಮುದ್ರಣ
ಧಾರವಾಡ